# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ–ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper

65,000

HAMPI TIMES E-PAPER READERS

94486 33038 | NEWS PAPER ADD - THE BEST ADVERTISING PLATFORM TO BOOST YOUR BUSINESS

E-mail: hampitimes@gmail.com | # Valmiki Circle hospet-583201



ಸಂಪುಟ:01 • ಸಂಚಿಕೆ:323 • ನೋಂದಣಿ ನಂ.:KARKAN27911 • ವಿಜಯನಗರ • 25.05.2024 • ಶನಿವಾರ • ಪುಟ:04 • ಬೆಲೆ:2
Volume:01 • Issue:323 • Reg.No:KARKAN27911 • VIJAYANAGARA • 25.05.2024 • Saturday • Page:04 • Rs:2


# ಹೋಟೆಲ್ ಮ್ಯಾನೇಜ್‌ಮೆಂಟ್‌ನಲ್ಲಿ ವಿಫುಲ ಅವಕಾಶ

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಹೇಳಿಕೆ | ಕೆಲಸದಲ್ಲಿ ನಿಷ್ಠೆ ತೋರಿದರೆ, ಉನ್ನತಿ ನಿಶ್ಚಿತ

■ **ಹಂಪಿ ಟೈಮ್ಸ್ ಬಳ್ಳಾರಿ**

ಹೋಟೆಲ್ ಮ್ಯಾನೇಜ್‌ಮೆಂಟ್ ಕ್ಷೇತ್ರದಲ್ಲಿ ಹಲವಾರು ಉದ್ಯೋಗ ಅವಕಾಶಗಳಿದ್ದು, ತರಬೇತಿ ಪೂರ್ಣಗೊಳಿಸಿದ ಅಭ್ಯರ್ಥಿಗಳು ನಿಷ್ಠೆಯಿಂದ ಕಾರ್ಯ ನಿರ್ವಹಿಸಿ, ಬದುಕನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಸಲಹೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕೈಗಾರಿಕಾ ಕೇಂದ್ರ, ಕೌಶಲ್ಯಾಭಿವೃದ್ಧಿ ಇಲಾಖೆ, ಪ್ರಧಾನಮಂತ್ರಿ ಖನಿಜ ಕ್ಷೇತ್ರ ಕಲ್ಯಾಣ ಯೋಜನೆ ಹಾಗೂ ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನಡಿ 60 ದಿನದ ಕೌಶಲ್ಯ ತರಬೇತಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಯುವ ಪೀಳಿಗೆಯು ಕೌಶಲ್ಯ ಚಟುವಟಿಕೆಗಳಲ್ಲಿ ತರಬೇತಿ ಪಡೆದರೆ, ಹೋಟೆಲ್ ಮ್ಯಾನೇಜ್‌ಮೆಂಟ್ ಸೇರಿದಂತೆ ವಿವಿಧ ರಂಗಗಳಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಬಹುದು ಎಂದು ವಿದ್ಯಾರ್ಥಿಗಳಿಗೆ



ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ಬಳ್ಳಾರಿ ಚೇಂಬರ್ ಕೌಶಲ್ಯಾಭಿವೃದ್ಧಿ ಕೇಂದ್ರವು ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನಡಿ 60 ದಿನದ ಕೌಶಲ್ಯ ತರಬೇತಿ ನೀಡಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ವಿವಿಧ ಹೆಸರಾಂತ ಹೋಟೆಲ್‌ಗಳಲ್ಲಿ ಸಂದರ್ಶನದ ಮೂಲಕ ಉದ್ಯೋಗ ಕಲ್ಪಿಸಿದೆ. ಆಯ್ಕೆಯಾದವರು ಸಾಧನೆಯ ಹಾದಿ ಮುಂದುವರೆಸಬೇಕು ಎಂದು ಆಶಿಸಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮಾತನಾಡಿ, ಒಂದು ದೇಶ ಅಭಿವೃದ್ಧಿಯಾಗಲು ಮೂರು ಪ್ರಮುಖ ಕ್ಷೇತ್ರಗಳಾದ ಕೃಷಿ, ಕೈಗಾರಿಕಾ ಮತ್ತು ಸೇವಾ ವಲಯಗಳ ಪಾತ್ರ ಬಹುಮುಖ್ಯವಾಗಿದ್ದು, ಅದರಲ್ಲಿ ಸೇವಾ ವಲಯದಿಂದ ಯುವ ಪೀಳಿಗೆಗೆ ಉದ್ಯೋಗಗಳು ಹೆಚ್ಚಾಗಿ ಸೃಷ್ಟಿಯಾಗುತ್ತವೆ ಎಂದು ಅಭಿಪ್ರಾಯ ಪಟ್ಟರು.

ಈ ಭಾಗದಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್ ಕ್ಷೇತ್ರದಲ್ಲಿ ಉದ್ಯೋಗಾವಕಾಶ ಹೆಚ್ಚಾಗಿದ್ದು, ಆಸಕ್ತರು ಹೋಟೆಲ್ ಮ್ಯಾನೇಜ್‌ಮೆಂಟ್ ತರಬೇತಿ ಪಡೆದು ಉದ್ಯೋಗವಕಾಶದ ಸದುಪಯೋಗ ಪಡೆದುಕೊಳ್ಳಬೇಕು. ಕೆಲಸವನ್ನು ಶ್ರದ್ಧೆಯಿಂದ ಮಾಡಿದರೆ ಜೀವನದಲ್ಲಿ ಉತ್ತುಂಗ ಸ್ಥಾನಕ್ಕೆ ತಲುಪುವಿರಿ ಎಂದು ಹೇಳಿದರು.

ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ ಕೌಶಲ್ಯ ಪೂರ್ಣ ತರಬೇತಿಯನ್ನು ಪೂರ್ಣಗೊಳಿಸಿರುವ ಅಭ್ಯರ್ಥಿಗಳಿಗೆ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಅಂತಾರಾಷ್ಟ್ರೀಯ ದರ್ಜೆಯ ಹೋಟೆಲ್‌ಗಳಾದ ಎವಾಲ್ವ್ ಬ್ಲಾಕ್, ವಿಜಯಶ್ರೀ ಹೆರಿಟೇಜ್, ಹೋಟೆಲ್ ಪೋಲಾ ಪ್ಯಾರಡೈಸ್, ರಾಯಲ್ ಆರ್ಕಿಡ್, ಶಿವಲೀಲಾ ಪ್ಯಾಲೇಸ್ ಹೋಟೆಲ್‌ಗಳಲ್ಲಿ ಉದ್ಯೋಗವಕಾಶ ಲಭಿಸಿವೆ.

ತರಬೇತಿ ಪಡೆದ ಅಭ್ಯರ್ಥಿಗಳಿಗೆ ಇದೇ ವೇಳೆ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಬಿ.ಸೋಮಶೇಖರ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪಿ.ಎಸ್.ಹಟ್ಟಪ್ಪ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಬಿ.ಮಹಾರುದ್ರಗೌಡ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಹಾಗೂ ಚೇಂಬರ್ ಆಫ್ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್‌ನ ಚೇರ್‌ಮನ್ ಯಶವಂತರಾಜ್ ನಾಗಿರೆಡ್ಡಿ ಸೇರಿದಂತೆ ಕೌಶಲ್ಯಾಭಿವೃದ್ಧಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಯವರು ಹಾಗೂ ಚೇಂಬರ್ ಆಫ್ ಕಾಮರ್ಸ್ ಪದಾಧಿಕಾರಿಗಳು, ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು.

## ಪ್ರತಿಷ್ಠಿತ ಖಾಸಗಿ ಶಾಲೆಗಳ ದಾಖಲಾತಿಗೆ ಪ್ರವೇಶ ಪರೀಕ್ಷೆ

### ಮೇ 28, ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 2024–25ನೇ ಸಾಲಿಗೆ 5 ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ 6 ನೇ ತರಗತಿಗೆ ಪ್ರತಿಷ್ಠಿತ ಖಾಸಗಿ ಶಾಲೆಗಳ ದಾಖಲಾತಿಗೆ ಅರ್ಹತಾ ಪ್ರವೇಶ ಪರೀಕ್ಷೆಯು ಮೇ 28 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ರವರೆಗೆ ನಗರದ ಬೆಳಗಲ್ ಕ್ರಾಸ್‌ನ ಸಂತ ಜೋಸೆಫ್ ಬಾಲಕಿಯರ ಪ್ರೌಢ ಶಾಲೆಯಲ್ಲಿ ಪರೀಕ್ಷೆ ನಡೆಸಲಾಗುತ್ತದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ದಿವಾಕರ ಅವರು ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳು ಆಯಾ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಪ್ರವೇಶ ಪತ್ರವನ್ನು ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.9964268268, 9900658907, 9110224569, 9986302091 ಇವರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತೋಟಗಾರಿಕೆ ತರಬೇತಿಗೆ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಲವಿ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ತೋಟಗಾರಿಕೆ ಇಲಾಖೆಯು ಜೂನ್ 15ರಿಂದ ಮಾರ್ಚ್ 31ರವರೆಗೆ 10 ತಿಂಗಳ ನಡೆಸುವ ತೋಟಗಾರಿಕೆ ತರಬೇತಿಗಾಗಿ ವಿಜಯನಗರ ಜಿಲ್ಲೆಯ ಆಸಕ್ತ ಅಭ್ಯರ್ಥಿಗಳಿಂದ ತೋಟಗಾರಿಕಾ ಇಲಾಖೆಯು ಅರ್ಜಿ ಆಹ್ವಾನಿಸಿದೆ.

ವಿಜಯನಗರ ಜಿಲ್ಲೆಯ ರೈತ ಮಕ್ಕಳ ಪುರುಷ ಮತ್ತು ಮಹಿಳೆ ಅಭ್ಯರ್ಥಿಗಳು ಅರ್ಜಿಯನ್ನು (ಈಗಾಗಲೇ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳನ್ನು ಹೊರತುಪಡಿಸಿ) ಜೂನ್ 3ರೊಳಗೆ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನಿಷ್ಠ ಎಸ್.ಎಸ್.ಎಲ್.ಸಿ ಉತ್ತೀರ್ಣರಾಗಿಬೇಕು, ಅಭ್ಯರ್ಥಿಯ ತಂದೆ, ತಾಯಿ ಅಥವಾ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರುಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ವಿಕಲಚೇತನರಿಗೆ ಕನಿಷ್ಟ 18 ವರ್ಷ ಮತ್ತು ಗರಿಷ್ಟ 33 ವರ್ಷ ಮಾಜಿ ಸೈನಿಕರಿಗೆ 33 ರಿಂದ ಗರಿಷ್ಟ 65 ವರ್ಷ ಹಾಗೂ ಸಾಮಾನ್ಯ ವರ್ಗದವರಿಗೆ ಕನಿಷ್ಟ 18 ವರ್ಷ ಗರಿಷ್ಟ 30 ವರ್ಷ ವಯೋಮಿತಿ ಹೊಂದಿರಬೇಕು. >>2

## ಸಾವಯವ ಪದ್ದತಿ ಅರಿವು ಕಾರ್ಯಾಗಾರ

■ **ಹಂಪಿ ಟೈಮ್ಸ್ ಕೊಟ್ಟೂರು**

ಪ್ರಸ್ತುತ ರೈತರು ಕೃಷಿಗೆ ರಾಸಾಯನಿಕ ವಿಷ ಗೊಬ್ಬರ ಬಳಕೆಯಿಂದಾಗುತ್ತಿರುವ ಮಣ್ಣಿನ ಸತ್ವ ಹಾಳು, ಬೆಳೆದ ಆಹಾರ ಪದಾರ್ಥಗಳು ಕೂಡಾ ವಿಷವಾಗುತ್ತಿದ್ದು, ಇದನ್ನು ನಿಯಂತ್ರಿಸಲು ರೈತರು ತಮ್ಮ ಕೃಷಿ ಚಟುವಟಿಕೆಗಳಲ್ಲಿ ಸಾವಯವ ಕೃಷಿ ಪದ್ದತಿ ಹೇಗೆ ಅಳವಡಿಕೊಳ್ಳಬಹುದು ಅರಿವು ಮೂಡಿಸಲು ಇಕ್ರಾ ಸಂಸ್ಥೆ ಜಾಗೃತಿ ಮೂಡಿಸಲು ಮುಂದಾಗಿದೆ.

ಕೊಟ್ಟೂರಿನ"ಭೂಮಿ ಮಿತ್ರ ಸಾವಯವ ರೈತ ಒಕ್ಕೂಟ ಹಾಗೂ ಇಕ್ರಾ ಸಂಸ್ಥೆ ಜಂಟಿಯಾಗಿ ಭಾನುವಾರ ಬೆಳಿಗ್ಗೆ 10 ಗಂಟೆಗೆ ಪಟ್ಟಣದ ಪಂಚಮಸಾಲಿ ಸಮುದಾಯ ಭವನದಲ್ಲಿ ರೈತರ ಸಭೆ ಕರೆದಿದ್ದು. ತಾಲೂಕಿನ ಎಲ್ಲಾ ರೈತರು ಸಭೆಗೆ ಆಗಮಿಸಿ ಅಗತ್ಯ ಮಾಹಿತಿ ಪಡೆಯಬೇಕು ಎಂದು ರೈತ ಒಕ್ಕೂಟ ತಿಳಿಸಿದೆ. ಕಿರುಚಿತ್ರ ಪ್ರದರ್ಶನ ನಡೆಯಲಿದ್ದು, ಒಂದೇ ಪ್ರದೇಶದಲ್ಲಿ ದೊಡ್ಡ ಸಂಖ್ಯೆಯ ಸಣ್ಣ ಮಳೆಯಾಶ್ರಿತ ರೈತ ಕುಟುಂಬಗಳು ಸಾವಯವ ಕೃಷಿ ವಿಧಾನದಿಂದ ಬಹುಬೆಳೆ ಪದ್ದತಿಯಲ್ಲಿ ಮಾಡಿದ ಸಾಧನೆ ಬಗ್ಗೆ ಹಾಗೂ ಮಾರಾಟಕ್ಕೆ ಲಭ್ಯ ಇರುವ ರೈತರ ಸಾವಯವ ಉತ್ಪನಗಳನ್ನು ಪ್ರದರ್ಶಿಸಲಾಗುತ್ತದೆ. ತಪ್ಪದೆ ತಾಲೂಕಿನ ಪ್ರತಿಯೊಬ್ಬ ರೈತರು ಕಾರ್ಯಾಗಾರ ಸಭೆಗೆ ಹಾಜರಾಗಿ ಅಮೂಲ್ಯ ಮಾಹಿತಿ ಪಡೆಯುವ ಮೂಲಕ ಕೃಷಿ ವಿಧಾನದಲ್ಲಿ "ಸತ್ವ ಆಹಾರ" ಬೆಳೆದು ಉತ್ತಮ ಆರೋಗ್ಯ ಗುಣಮಟ್ಟದ, ಸತ್ವಯುತವಾದ ಭೂಮಿಯನ್ನು ರಕ್ಷಿಸಿಕೊಳ್ಳಲು ತಯಾರಾಗೋಣ ಬನ್ನಿ ಎಂದು ಕೋರಿದೆ.

# ಗ್ಯಾರಂಟಿಗಳ ನಡುವೆಯೂ ಹೆಚ್ಚಿದ ಕಳ್ಳತನ

## ಪೊಲೀಸರು ಮನಸ್ಸು ಮಾಡಿದ್ರೆ ಕಳ್ಳರು ಅಂದರ್

### ಪೊಲೀಸರ ಮೇಲಿನ ನಂಬಿಕೆ ಹುಸಿಯಾಗದಿರಲಿ:ಸಿಪಿಐ




■ **ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದಲ್ಲಿ ಹಗಲು ಹೊತ್ತಿನಲ್ಲಿಯೇ ಮನೆಗಳ ಕಳ್ಳತನ ಯಥೇಚ್ಛವಾಗಿ ನಡೆಯುತ್ತಿದ್ದು ಕೂಡಲೇ ಕಳ್ಳರನ್ನು ಬಂಧಿಸಿ ಭಯಬೀತರಾಗಿರುವ ಜನರಿಗೆ ರಕ್ಷಣೆ ಒದಗಿಸಬೇಕು ಎಂದು ಸಿಪಿಐ ತಾಲೂಕು ಘಟಕದ ವತಿಯಿಂದ ಶುಕ್ರವಾರ ಡಿವೈಎಸ್ಪಿ ಮಲ್ಲೇಶಪ್ಪ ಮಲ್ಲಾಪುರ ಅವರಿಗೆ ಮನವಿ ಸಲ್ಲಿಸಿದರು.

> ಕಳ್ಳತನವಾಗಿರುವ ಮನೆಗಳ ಪರಿಶೀಲನೆ ಮಾಡಿ, ಮಾಹಿತಿ ಕಲೆಹಾಕಿ ಕಳ್ಳರ ಜಾಡನ್ನು ಹಿಡಿಯಲು ಸಿಬ್ಬಂದಿ ಬಲೆ ಬೀಸಿದ್ದಾರೆ. ಜನರು ಸಹ ಸಹಕಾರ ನೀಡಬೇಕು. ಬೀಗ ಹಾಕಿ ಊರಿಗೆ ಹೋಗುವುದಾದರೆ ಠಾಣೆಗೆ ಮಾಹಿತಿ ನೀಡಿದರೆ ಭದ್ರತೆ ಹೆಚ್ಚಿಸಲಾಗುವುದು
>
> **– ವಿನಾಯಕ, ಸಿಪಿಐ**

ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಚ್.ವೀರಣ್ಣ ಮಾತನಾಡಿ, ಕಳೆದ ಒಂದು ತಿಂಗಳಿನಿಂದ ಪಟ್ಟಣದಲ್ಲಿ ಹಾಡುಹಗಲೇ ಕಳ್ಳತನ ನಡೆಯುತ್ತಿದ್ದು, ಕಳ್ಳರು ಒಂದರ ನಂತರ ಒಂದು ಮನೆಗಳನ್ನು ಹಾಡುಹಗಲೇ ಕಳ್ಳತನ ಮಾಡಿ ಲಕ್ಷಗಟ್ಟಲೆ ಬೆಲೆ ಬಾಳುವ ಬಂಗಾರ, ಬೆಳ್ಳಿ, ನಗದು ಹಣವನ್ನು ದೋಚುತ್ತಿದ್ದಾರೆ. ಕಳ್ಳತನ ಜಾಸ್ತಿಯಾಗುತ್ತಿದ್ದು, ಇದರಿಂದ ಜನರು ಭಯಬೀತರಾಗಿದ್ದಾರೆ. ಈಗಾಗಲೇ ಮಾರುತಿ ಟೆಕ್ಸ್ ಟೈಲ್ಸ್, ಲೋಕೋಪಯೋಗಿ ಇಲಾಖೆ ನೌಕರ ಹೈದರ್, ನಿವೃತ್ತ ನೌಕರ ಸೋಮಶೇಖರ್ ಮನೆಗಳಲ್ಲಿ ಕಳ್ಳತನ ಮಾಡಿದ್ದು, ರಾಜೀವ್ ಗಾಂಧಿ ನಗರದಲ್ಲಿನ 5 ಮನೆಗಳ ಮೇಲೂ ದಾಳಿ ಮಾಡಿದ್ದಾರೆ. ಗುರುವಾರ ಹಾಡುಹಗಲೇ ಮಧ್ಯಾಹ್ನ ಮನೆ ಬೀಗ ಒಡೆದು ಹಣ, ಚಿನ್ನ, ಬೆಳ್ಳಿ ದೋಚಿದ್ದಾರೆ. ಪರಿಸ್ಥಿತಿ ಈಗೆ ಮುಂದುವರಿದರೇ ಹೇಗೆ ಎಂದು ಜನ ಗಾಬರಿಯಾಗಿದ್ದಾರೆ. ಪಟ್ಟಣದಲ್ಲಿ ಪವನ ಯಂತ್ರ ಹಾಗೂ ಸೋಲಾರ್ ವಿದ್ಯುತ್ ಯಂತ್ರಗಳನ್ನು ಅಳವಡಿಸಲು ಬೇರೆ ರಾಜ್ಯಗಳಿಂದ ಕಾರ್ಮಿಕರು ಬಂದಿದ್ದು ಇವರ ಬಗ್ಗೆ ಇಲಾಖೆ ಮಾಹಿತಿ ಸಂಗ್ರಹಿಸಬೇಕು. ಇವರೊಟ್ಟಿಗೆ ಸ್ಥಳೀಯರು ಸೇರಿ ಕಳ್ಳತನ ಮಾಡುತ್ತಿರಬಹುದು ಎಂಬ ಶಂಕೆಯಾಗಿದೆ. ಈ ಕೂಡಲೇ ಪೊಲೀಸ್ ಇಲಾಖೆ ಕಾರ್ಯಪ್ರವೃತ್ತರಾಗಿ ಕಳ್ಳರನ್ನು ಹಿಡಿದು ಹೆಡೆಮುರಿ ಕಟ್ಟಬೇಕು. ಪೊಲೀಸ್ ಇಲಾಖೆಯ ಮೇಲೆ ಹಾಗೂ ಅಧಿಕಾರಿಗಳ ಮೇಲೆ ಅಪಾರ ಗೌರವ ಮತ್ತು ನಂಬಿಕೆಯನ್ನು ಜನರು ಇಟ್ಟುಕೊಂಡಿದ್ದಾರೆ.

ಆದರೆ ಇಲಾಖೆಯಲ್ಲಿ ಕೆಲ ಪೊಲೀಸ್ ಸಿಬ್ಬಂದಿಗಳು ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದ ಕಾರಣದಿಂದ ಸಾರ್ವಜನಿಕರಿಗೆ ಇಲಾಖೆಯ ಮೇಲೆ ನಂಬಿಕೆ ಮತ್ತು ಗೌರವ ಹಾಳಾಗಬಾರದು, ಜನರ ನಂಬಿಕೆ ಹುಸಿಗೊಳಿಸದೇ ಕಳ್ಳರನ್ನು ಬಂಧಿಸಿ ಜನರಿಗೆ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿ ಸಿಪಿಐ ವಿನಾಯಕ ಮಾತನಾಡಿ, ಈಗಾಗಲೇ ಕಳ್ಳತನ ವಾಗಿರುವ ಮನೆಗಳನ್ನ ಪರಿಶೀಲನೆ ಮಾಡಿ, ಇಲಾಖೆಯು ಮಾಹಿತಿ ಕಲೆಯಾಕಿ ಕಳ್ಳರ ಜಾಡನ್ನು ಹಿಡಿಯಲು ಎಲ್ಲಾ ಪ್ರಯತ್ನ ಮಾಡುತ್ತಿದ್ದು, ಕಳ್ಳರಿಗೆ ಬಲೆಬೀಸಲು ಸಿಬ್ಬಂದಿಗಳು ಸಹ ಕಾರ್ಯಪ್ರವೃತ್ತರಾಗಿದ್ದು, ಜನರು ಸಹ ಸಹಕಾರ ನೀಡಬೇಕು, ಬೀಗ ಹಾಕಿ ಹೋಗುವ ಮನೆಗಳನ್ನು ಇಲಾಖೆಯ ಗಮನಕ್ಕೆ ತನ್ನಿ ಎಂದು ಧ್ವನಿವರ್ಧಕಗಳ ಮೂಲಕ ಪ್ರಚಾರ ಮಾಡಿದರು ಸಹ ನಮಗೆ ಮಾಹಿತಿ ನೀಡಿಲ್ಲ, ಆದ್ದರಿಂದ ಸಾರ್ವಜನಿಕರು ಬೀಗ ಹಾಕಿ ಹೋಗುವುದಾದರೆ ನಮಗೆ ಮಾಹಿತಿ ನೀಡಿ ಎಂದು ತಿಳಿಸಿದರು.

ಸಿಪಿಐ ತಾಲೂಕು ಕಾರ್ಯದರ್ಶಿ ಕರಿಯಪ್ಪ, ಖಜಾಂಚಿ ಯು.ಪೆನ್ನಪ್ಪ, ಅನಂತೇಶ್, ಕುಬೇರ, ಕಂದಗಲ್ಲು ತಿಮ್ಮಣ್ಣ, ವೈ.ಮಲ್ಲಿಕಾರ್ಜುನ, ಕೊಟ್ರೇಶ್, ಹರೀಶ್ ಸೇರಿದಂತೆ ಅನೇಕರು ಇದ್ದರು.







ಮಕ್ಕಳ ಜ್ಞಾನ ವಿಕಾಸಕ್ಕೆ
ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ


**ಮೈಕ್ರೋ ನ್ಯೂಸ್**

## ಮೇ 27 ರಂದು ಮಿನಿ ಉದ್ಯೋಗ ಮೇಳ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ಮೇ 27 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಮಿನಿ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪಿ.ಎಸ್.ಹಟ್ಟಪ್ಪ ಅವರು ತಿಳಿಸಿದ್ದಾರೆ.

ಈ ಮೇಳದಲ್ಲಿ 4 ರಿಂದ 5 ಕಂಪನಿಗಳು ಭಾಗವಹಿಸುತ್ತಿದ್ದು, ಇವರು ತಮ್ಮಲ್ಲಿನ ಖಾಲಿ ಇರುವ ಹುದ್ದೆಗಳಿಗೆ ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳುವರು. ಈ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ. ಮೇಳದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ತಮ್ಮ ಆಧಾರ್ ಕಾರ್ಡ್ ಪ್ರತಿ ಮತ್ತು ಸ್ವ–ವಿವರ (ಖಇಖಗಒಇ) ಗಳೊಂದಿಗೆ ಹಳೆಯ ತಾಲ್ಲೂಕು ಕಚೇರಿ ಹಿಂಭಾಗದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಗೆ ಅಂದು ನಡೆಯುವ ಮಿನಿ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದು.

ಆಸಕ್ತ ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿ, ಇದರ ಸದುಪಯೋಗ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ಮೊ.9742718891, 8277000619 ಗೆ ಸಂಪರ್ಕಿಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಡೂರು ವಸತಿ ನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಸಂಡೂರು**

ಸಂಡೂರು ತಾಲ್ಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ಯಶವಂತನಗರದ ಸರ್ಕಾರಿ ಪರಿಶಿಷ್ಟ ಪಂಗಡ ವಾಲ್ಮೀಕಿ ಆಶ್ರಮ ಶಾಲೆಯಲ್ಲಿ 1ನೇ ತರಗತಿ ಮತ್ತು 6ನೇ ತರಗತಿಗೆ ವಸತಿ ನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

ಅರ್ಜಿಗಳನ್ನು ಯಶವಂತನಗರ ಸರ್ಕಾರಿ ಪರಿಶಿಷ್ಟ ಪಂಗಡ ವಾಲ್ಮೀಕಿ ಆಶ್ರಮ ಶಾಲೆಯಲ್ಲಿಯೇ ಪಡೆದು, ಭರ್ತಿಮಾಡಿ ಜೂ.03 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08395–200073 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಲ್ಲಾ ವಕ್ಫ್ ಸಂಸ್ಥೆಗಳು ಮಾದರಿ ನಿಯಮಾವಳಿ ಅನುಷ್ಠಾನಕ್ಕೆ ಸೂಚನೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ಎಲ್ಲಾ ವಕ್ಫ್ ಸಂಸ್ಥೆಗಳು ರಾಜ್ಯ ವಕ್ಫ್ ಮಂಡಳಿಯ ಮಾದರಿ ನಿಯಮಾವಳಿ ನಮೂನೆ ನಂ.42(ಬೈಲಾ) ಅಂಗೀಕರಿಸಿಕೊಳ್ಳುವುದು ಕಡ್ಡಾಯವಾಗಿದೆ ಎಂದು ಜಿಲ್ಲಾ ವಕ್ಫ್ ಅಧಿಕಾರಿ ಸೈಯದ್ ಉಮ್ಮರ್ ಅಹ್ಮದ್ ಅವರು ತಿಳಿಸಿದ್ದಾರೆ.

ಈಗಾಗಲೇ ರಾಜ್ಯ ವಕ್ಫ್ ಮಂಡಳಿಯಲ್ಲಿ ನೋಂದಣಿಯಾದ ಸಂಸ್ಥೆಗಳು ಉಚ್ಚ ನ್ಯಾಯಾಲಯವು 2024 ಏ.23 ರಂದು ಹೊರಡಿಸಿರುವ ಆದೇಶದಂತೆ ಮಾದರಿ ನಿಯಮಾವಳಿಯನ್ನು ಪಾಲಿಸಬೇಕು ಎಂದು ತಿಳಿಸಿದೆ.

ಈವರೆಗೂ ಮಾದರಿ ನಿಯಮಾವಳಿಯನ್ನು ಪಾಲಿಸದ ಜಿಲ್ಲೆಯ ವಕ್ಫ್ ಸಂಸ್ಥೆಗಳು ರಾಜ್ಯ ವಕ್ಫ್ ಮಂಡಳಿಯ ಅಂಗೀಕಾರಕ್ಕಾಗಿ ನಮೂನೆ.42 ನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಜಿಲ್ಲಾ ವಕ್ಫ್ ಕಚೇರಿಗೆ ಅತೀ ಶೀಘ್ರದಲ್ಲಿ ಸಲ್ಲಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬೆಳಕಿನ ಹಾದಿ

# ಸಾರ್ಥಕ ಬದುಕಿನ ಗುಟ್ಟು ಬುದ್ಧನ ಉಪದೇಶಗಳು..

ಬೌದ್ಧಧರ್ಮವು ಭಾರತದಲ್ಲಿ 2,600 ವರ್ಷಗಳ ಹಿಂದೆ ಪ್ರಾರಂಭವಾಯಿತು, ಅದು ವ್ಯಕ್ತಿಯನ್ನು ಪರಿವರ್ತಿಸುವ ಸಾಮರ್ಥ್ಯವನ್ನು ಹೊಂದಿರುವ ಜೀವನ ವಿಧಾನವಾಗಿದೆ. ಬದಲಾದ ಜೀವನ ಶೈಲಿ, ಅಶಾಂತಿ, ಆತುರ, ಅತಿಯಾದ ಸಿಟ್ಟು, ಅತಿಯಾದ ನಂಬಿಕೆ,ಎಲ್ಲವೂ



ಈಗಲೆ ಬೇಕು,ನಾನು ಅಂದುಕೊಂಡ ಹಾಗೆ ಆಗಬೇಕು..... ಅಬ್ಬಬ್ಬಾ ನಿಜವಾಗಲೂ ವಾಸ್ತವ ಪರಿಸ್ಥಿತಿಗೆ ಬುದ್ಧನ ಉಪದೇಶದ ಅಗತ್ಯ ಇದೆ." ಆಸೆಯೆ ದುಃಖಕ್ಕೆ ಮೂಲ" ಯಾವಾಗಲೂ ನಾವು ಅತಿಯಾದ ಆಸೆ ಮಾಡಬಾರದು, ನಮ್ಮ ಶ್ರಮದ ಮೇಲೆ ನಮ್ಮ ಕನಸುಗಳು ಸಾಕರಾಗೊಳ್ಳುತ್ತವೆ. ಇತ್ತೀಚಿನ ದಿನಗಳಲ್ಲಿ ಎಲ್ಲವೂ ಬೇಕು, ಅದು ಈಗಲೇ ಬೇಕು, ಹೀಗೆ ಎಲ್ಲ ಮೋಜು,ಮಸ್ತಿ, ಐಶ್ವರ್ಯ, ಹಣ, ಹೆಣ್ಣಿಗೂ... ಕೂಡ ಬಿಡ್ತಾ ಇಲ್ಲ. ಓದದೇ ಉತ್ತಮ ಫಲಿತಾಂಶದ ನಿರೀಕ್ಷೆ.. ಬರದಿದ್ದರೆ ಆತ್ಮ ಹತ್ಯೆ,ಸೋಮಾರಿತನ.ಆದರೂ ಶ್ರೀಮಂತನಾಗಲು ಹಣ ಗಳಿಸುವ ಸುಲಭ ಮಾರ್ಗದ ಮೂಲಕ ಕೊಲೆ, ಸುಲಿಗೆ, ಹಾಡುಹಗಲೇ ಕಳ್ಳತನ. ಕಂಡ ಕಂಡ ಹೆಣ್ಣು ಮಕ್ಕಳಿಗೆ ಪ್ರೀತಿ ಪ್ರೇಮ ಅಂತಹ ಅರ್ಹತೆ ಇಲ್ಲದಿದ್ದರೂ ಪ್ರೀತಿಸು ಅಂತ ಪೀಡಿಸುವ ಪೀಡೆಗಳು, ನಿರಾಕರಿಸಿದ್ದರೆ ನಿರ್ಧಾಕ್ಷಿಣವಾಗಿ ಕೊಲೆಗೈಯುವ ಮನೋವೃತ್ತಿ... ಹೀಗೆ ಮಾನವೀಯ ಮೌಲ್ಯ ಇಲ್ಲದ ಜೀವನ ಶೈಲಿ ಹೆಚ್ಚುತ್ತಿದೆ.

ದಿನ ನಿತ್ಯದ ಜೀವನದಲ್ಲಿ ಮನೆಯಿಂದ... ಉನ್ನತ ಶಿಕ್ಷಣ ಹಾಗೂ ಪಾಲಕರಿಂದ...... ಶಿಕ್ಷಕರು ಉಪನ್ಯಾಸಕರು ಧರ್ಮಗುರುಗಳ ವರೆಗೂ ಬುದ್ಧ ವಾಣಿಯಲ್ಲಿ ಇರುವ ನೈತಿಕತೆ, ಚಿಂತನೆ, ಶಾಂತಿ, ಸಮಾಧಾನ ಸರಳತೆ, ಶಿಸ್ತು,ದುಡಿಮೆ,ಮನಸಿನ ನಿಯಂತ್ರಣ ಹೀಗೆ ಇವೆಲ್ಲ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡು ಜೀವನ ರೂಪಿಸಿಕೊಂಡು ಬದುಕುವುದನ್ನು ಕಲಿಸಬೇಕು. ನಮ್ಮ ಬದುಕು, ನಮ್ಮ ಯೋಚನೆ ಇವು ನಮ್ಮ ವ್ಯಕ್ತಿತ್ವ ಕ್ಕೆ ಕನ್ನಡಿ ಹಿಡಿದ ಹಾಗೆ. ಶಾಂತಿ ನೆಮ್ಮದಿ ನಮ್ಮಲ್ಲಿಯೇ ಇವೆ, ನಮ್ಮಲ್ಲಿಯೇ ಇರುವ ದ್ವೇಷ, ಅಸೂಯೆ, ಸೋಮಾರಿತನ ನಮಿಂದ ನಾವೇ ತೆಗೆದು ಹಾಕುವುದು ಎಂದು ಬುದ್ಧ ಉಪದೇಶ ಹೇಳುತ್ತದೆ. 29 ನೇ ವಯಸ್ಸಿನಲ್ಲಿ, ಗೌತಮನು ಮನೆಯನ್ನು ತೊರೆದನು ಮತ್ತು ತನ್ನ ಸಂಪತ್ತಿನ ಜೀವನವನ್ನು ತಿರಸ್ಕರಿಸಿದನು ಮತ್ತು ವೈರಾಗ್ಯದ ಜೀವನ ಶೈಲಿಯನ್ನು



ಸ್ವೀಕರಿಸಿದನು, ಅಥವಾ ತೀವ್ರವಾದ ಸ್ವಯಂ-ಶಿಸ್ತು.ಸತತ 49 ದಿನಗಳ ಧ್ಯಾನದ ನಂತರ, ಗೌತಮನು ಬಿಹಾರದ ಬೋಧಗಯಾ ಎಂಬ ಹಳ್ಳಿಯ ಮರವೊಂದರ ಕೆಳಗೆ ಬೋಧಿಗೆ (ಜ್ಞಾನೋದಯ) ಪ್ರಾಪ್ತನಾದನು. ದುಃಖ (ದುಃಖ) ಪ್ರಪಂಚದ ಸಾರವಾಗಿದೆ. ಪ್ರತಿಯೊಂದು ದುಃಖಕ್ಕೂ ಒಂದು ಕಾರಣವಿದೆ – ಸಮುದ್ಯ. ಸಂಕಟವನ್ನು ನೀಗಿಸಬಹುದು – ನಿರೋಧ . ಅತ್ತಂಗ ಮಗ್ಗ (ಎಂಟು ಪಟ್ಟು ಮಾರ್ಗ) ಅನುಸರಿಸುವ ಮೂಲಕ ಇದನ್ನು ಸಾಧಿಸಬಹುದು.

**ಎಂಟು ಪಟ್ಟು ಮಾರ್ಗಗಳು:** ಇದು ಜ್ಞಾನ, ನಡವಳಿಕೆ ಮತ್ತು ಧ್ಯಾನ ಅಭ್ಯಾಸಗಳಿಗೆ ಸಂಬಂಧಿಸಿದ ವಿವಿಧ ಅಂತರ್ಸಂಪರ್ಕಿತ ಚಟುವಟಿಕೆಗಳನ್ನು ಒಳಗೊಂಡಿದೆ.

ಸರಿಯಾದ ನೋಟ, ಸರಿಯಾದ ಉದ್ದೇಶ, ಸರಿಯಾದ ಮಾತು ಸರಿಯಾದ ಕ್ರಮ, ಸರಿಯಾದ ಜೀವನೋಪಾಯ, ಸರಿಯಾದ ಸಾವಧಾನತೆ, ಸರಿಯಾದ ಪ್ರಯತ್ನ, ಸರಿಯಾದ ಏಕಾಗ್ರತೆ ಇಂತಹ ಸರಳ ವಿಚಾರಗಳನ್ನು ಬೋಧಿಸಿದ ಗೌತಮ ಬುದ್ಧ ನಮಗೆಲ್ಲ ಆದರ್ಶ ಇಂತಹ ಆದರ್ಶ ತತ್ವಗಳನ್ನು ನಾವು ಇಂದಿನ ಪೀಳಿಗೆಗೆ ತಿಳಿಸುವ ಮೂಲಕ ನಾವು ಕೂಡ ಆ ಆದರ್ಶಗಳನ್ನು ಅಳವಡಿಸಿಕೊಳ್ಳುವ ಮೂಲಕ ಜೀವನ ನಡೆಸಿದಾಗ ಮಾತ್ರ ನಾವು ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಬಹುದಾಗಿದೆ. ಜೊತೆಗೆ ಸಮಾಜದ ಕೆಟ್ಟ ಆಲೋಚನೆ ಉಳ್ಳ ಮನಸುಗಳ ಕಶ್ಮಲಗಳನ್ನು ತೊಡೆದು ಹಾಕಬಹುದಾಗಿದೆ.

**– ನಂದಿನಿ ಸನಬಾಳ್, ಶಿಕ್ಷಕಿ, ಕಲಬುರ್ಗಿ**

## ನೀವೂ ಬರೆಯಬಹುದು

**ಹಂಪಿ ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಕಾಯಕಲ್ಪಕ್ಕೆ ಕಾಯುತ್ತಿದೆ ಪೂರ್ವ ಪ್ರಾಥಮಿಕ ಶಿಕ್ಷಣ

ಸರಕಾರಿ ಕನ್ನಡ ಶಾಲೆಗಳ ಗುಣಮಟ್ಟ, ವಿಲೀನ ಪ್ರಕ್ರಿಯೆ, ಇಂಗ್ಲಿಷ್ ಮಾಧ್ಯಮ ಕುರಿತ ಚರ್ಚೆಗಳು ಇಂದು ತಾರಕಕ್ಕೇರಿದೆ. ಇದಕ್ಕೆ ಪೂರಕವೆಂಬಂತೆ ಸರಕಾರಿ ಶಾಲೆಯಲ್ಲಿ ಆಂಗ್ಲಭಾಷೆಯ ಎಲ್.ಕೆ.ಜಿ./ಯು.ಕೆ.ಜಿಗಳನ್ನು ಪ್ರಾರಂಭಿಸಿರುವುದರಿಂದ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಂಗನವಾಡಿಗಳನ್ನು ಮುಚ್ಚುವ ಪರಿಸ್ಥಿತಿ ಎದುರಾಗಿದೆ. ವಿಪರ್ಯಾಸವೆಂದರೆ ನಮ್ಮಲ್ಲಿ ಮಗುವಿಕೆ ತನ್ನ ಮನೆ ಭಾಷೆಯ ಮೂಲಕ ಅರಳುವಂತೆ ಮಾಡುವ ಅಂಗನವಾಡಿಗಳು ಪೂರ್ವ ಪ್ರಾಥಮಿಕ ಶಿಕ್ಷಣದ ಕೇಂದ್ರಗಳು ಎಂಬ ಪರಿಜ್ಞಾನ ಇಂದಿಗೂ ಸಾರ್ವತ್ರಿಕವಾಗಿಲ್ಲ.

ಸಂಶೋಧನೆಗಳ ಪ್ರಕಾರ ಮಗು ಭೂಮಿಗೆ ಬರುವುದಕ್ಕಿಂತ ಮುಂಚೆಯೇ ಶೇ 30ರಷ್ಟು ಮೆದುಳಿನ ಬೆಳವಣಿಗೆ ಯಾಗಿರುತ್ತದೆ. ನಂತರ ಮೂರು ವರ್ಷದೊಳಗೆ ಶೇ 20ರಷ್ಟು (ಒಟ್ಟಾರೆ ಶೇ 50) ಬೆಳೆದಿರುತ್ತದೆ (ಹಾಗಾಗಿಯೇ ನಮ್ಮಲ್ಲಿ ಮೂರು ವರ್ಷದ ಬುದ್ದಿ ನೂರು ವರ್ಷದವರೆಗೂ ಎಂಬ ಗಾದೆ ಇದೆ). ನಂತರ ಎಂಟುವರ್ಷದೊಳಗೆ ಶೇ 30ರಷ್ಟು ವಿಕಾಸ ಹೊಂದುತ್ತದೆ. ಅಂದರೆ ಅಲ್ಲಿಗೆ ಆ ಮಗುವಿನ ಶೇ80ರಷ್ಟು ಮೆದುಳಿನ ಬೆಳವಣಿಗೆಯಾಗಿ ಗ್ರಹಿಕೆಯು ಅತ್ಯುನ್ನತ ಮಟ್ಟದಲ್ಲಿರುತ್ತದೆ. ನಂತರ ಜೀವಿತದ ಕೊನೆವರೆಗೂ ಮಗು ಅದರಮೇಲೆಯೇ ತನ್ನ ಜ್ಞಾನವನ್ನು ಕಟ್ಟಿಕೊಳ್ಳುತ್ತದೆ. ಹಾಗಾಗಿ ನಾವು ಆ ವಯೋಮಾನವನ್ನು ಅಲಕ್ಷಿಸುವಂತೆಯೇ ಇಲ್ಲ. ಆದರೆ ನಮಗೆ ಅದರ ಸರಿಯಾದ ಜ್ಞಾನವಿಲ್ಲದೇ, ಮುಂದಿನ ದಿನಗಳ ಶಿಕ್ಷಣಕ್ಕೆ ಮಾತ್ರ ಆದ್ಯತೆ ನೀಡುತ್ತಿರುವುದನ್ನು ಕಾನುತ್ತಿದ್ದೇವೆ.



ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Hampi Times E-paper
SCAN AND READ

ಮಗುವಿನ ಶಿಕ್ಷಣ ಹುಟ್ಟಿನಿಂದಲೇ ಪ್ರಾರಂಭ ವಾಗುತ್ತದೆ. ಮಂದೆ10-12ನೇ ವಯಸ್ಸಿನವರೆಗೆ ಮಗುವಿನ ಅಗತ್ಯಗಳು ಅದಕ್ಕೆ ಕೊಡಬೇಕಾದ ಶಿಕ್ಷಣ, ವಿಷಯ, ಕ್ರಮ ಇತ್ಯಾದಿಗಳು ವಿಶಿಷ್ಟವಾಗಿರುವ ಜೊತೆ ಯಲ್ಲಿ ವೈಜ್ಞಾನಿಕವಾಗಿ ರಬೇಕೆಂದು ವಿಶ್ವದಲ್ಲಿನ ಎಲ್ಲಾ ಶಿಕ್ಷಣ ತಜ್ಞರ ಒಮ್ಮತದ ಅಭಿಪ್ರಾಯ. ಮಗುವಿನ ಆರಂಭದ ಕೆಲ ವರ್ಷಗಳ ಅವಧಿ ಇಡೀ ಜೀವನವನ್ನೇ ರೂಪಿಸಬಲ್ಲ ಮಹತ್ವದ ಘಟ್ಟ. ಚಿಕ್ಕ ಮಕ್ಕಳು ತಮ್ಮದೇ ಆದ ವ್ಯಕ್ತಿ-ವೈಶಿಷ್ಟ್ಯ, ಭಿನ್ನತೆ, ಮಾನಸಿಕ ಸ್ಥಿತಿ, ವಿಭಿನ್ನ ಅಭಿರುಚಿ, ಆಸಕ್ತಿ, ಸ್ವಭಾವಗಳಿಂದ ಕೂಡಿದ್ದರೂ, ಕೆಲವು ಗುಣಗಳು ಎಲ್ಲಾ ಮಕ್ಕಳಲ್ಲಿ ಸಾಮ್ಯತೆಯಿಂದ ಕೂಡಿರುತ್ತವೆ. ಇಂತಹ ಅಂಶಗಳನ್ನು ಅರಿತುಕೊಂಡು ಮಗುವಿನ ಸುಂದರ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಶಾಲಾ ಪೂರ್ವ ಶಿಕ್ಷಣ ನೀಡಬೇಕಾಗುತ್ತದೆ.

ಮನೆ ಮತ್ತು ಶಿಕ್ಷಣದ ಮಧ್ಯೆ ಪೂರ್ವ ಶಿಕ್ಷಣ ಕೊಂಡಿಯಂತೆ ಕಾರ್ಯನಿರ್ವಹಿಸುತ್ತದೆ. ಇದು ಮುಖ್ಯವಾಗಿ ಮಕ್ಕಳಲ್ಲಿ ಆಸಕ್ತಿ ಹುಟ್ಟಿಸಿ ಭಾಷೆಯ ಕಲಿಕೆ ಮತ್ತು ಓದಿನ ಉಚ್ಚಾರಣೆ, ಗಣಿತದ ಪರಿಚಯ, ವಿಜ್ಞಾನ ಕೌಶಲ, ಸಮಾಜ ಕೌಶಲ, ಅವಯವಗಳ ಬೆಳವಣಿಗೆ, ಸ್ಪರ್ಷ ಅನುಭವ, ಅಭಿವೃದ್ಧಿ ಕೌಶಲಗಳ ಬೆಳವಣಿಗೆಗೆ ಬಹುಮುಖ್ಯ ಮಾಧ್ಯಮವಾಗಿದೆ. ಆಟ ಆಡಲು ಮತ್ತು ಇತರರ ಜೊತೆಗೆ ಸರಿಯಾದ ರೀತಿ ವ್ಯವಹರಿಸಲು ಉತ್ತಮ ಹಂತ. ಸಂಗೀತ, ಕಲೆ ಹಾಗೂ ಸಾಮಾಜಿಕ ನಡತೆಗಳ ಬಗ್ಗೆ ಹಲವಾರು ವಸ್ತುಗಳನ್ನು ಹಾಗೂ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಅದುವರೆಗೂ ಮನೆಯಲ್ಲಿ ಹೆಚ್ಚಿನ ಸಮಯ ಕಳೆದ ಮಗುವಿಗೆ, ಅಂಗನವಾಡಿ ಯಾವುದೇ ಆತಂಕವಿಲ್ಲದೆ, ತಮ್ಮ ಪೋಷಕರಿಂದ ದೂರವಾಗಿ ಶಾಲಾ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾಡುತ್ತದೆ. ಮಕ್ಕಳಿಗೆ ನಿಯಮಿತವಾಗಿ ಒಂದು ನಿರ್ದಿಷ್ಟ ಗುಂಪಿನೊಂದಿಗೆ ಪರಸ್ಪರ ವ್ಯವಹರಿಸಲು ಹಾಗೂ ಆಟ ಆಡಲು ಮೊದಲಬಾರಿಗೆ ವೇದಿಕೆಯನ್ನು ಪೂರ್ವ ಪ್ರಾಥಮಿಕ ಶಿಕ್ಷಣ ಒದಗಿಸುತ್ತದೆ.

ಶಿಶುವಿಹಾರದಲ್ಲಿ ಚಿಕ್ಕಮಕ್ಕಳು ಆಟ ಆಡುವುದರೊಂದಿಗೆ ಪಾಠವನ್ನೂ ಕಲಿಯುತ್ತಾರೆ. ಇತರ ಮಕ್ಕಳು ಹಾಗೂ ಶಿಕ್ಷಕರೊಂದಿಗೆ ಬೆರೆಯುವುದನ್ನೂ ಸಹ ಕಲಿಯುತ್ತಾರೆ. ಸ್ನಾಯುಗಳ ಸಾಕಷ್ಟು ಹೊಂದಾಣಿಕೆ ಹಾಗೂ ಮಗುವಿನ ಮೂಲ ಚಲನ ಸಾಮರ್ಥ್ಯದೊಂದಿಗೆ, ಆರೋಗ್ಯ ಪೂರ್ಣ ದೈಹಿಕತೆ ಬೆಳೆಸಿಕೊಳ್ಳುತ್ತದೆ. ಆರೋಗ್ಯಕರ ಹವ್ಯಾಸಗಳನ್ನು ರೂಢಿಸಿಕೊಳ್ಳಲು ಪ್ರಾರಂಭಿಸುತ್ತದೆ. ತನ್ನ ವೈಯಕ್ತಿಕತೆಗೆ ಅಗತ್ಯವಾದ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳುತ್ತದೆ. ಉದಾಹರಣೆಗೆ ಮಕ್ಕಳು ತಮ್ಮ ದಿನನಿತ್ಯದ ಕೆಲಸಕ್ಕೆ ಸಿದ್ಧಗೊಳ್ಳುತ್ತಾರೆ. ತನ್ನ ಬಟ್ಟೆ ತಾನೇ ಧರಿಸುವುದು, ತನ್ನ ಆಹಾರ ತಾನೇ ಸೇವಿಸುವುದು, ಶೌಚಕ್ಕೆ ಹೋಗುವುದು ಇತ್ಯಾದಿ. ತಮ್ಮ ಭಾವನೆಗಳನ್ನು ಅರ್ಥಮಾಡಿಕೊಂಡು ಅಭಿವ್ಯಕ್ತಿ ಪಡಿಸುತ್ತಾ ಭಾವನಾತ್ಮಕ ಪರಿಪಕ್ವತೆ ಪಡೆಯುತ್ತದೆ. ಸಮಾಜಕ್ಕೆ ಉಪಯುಕ್ತ ವರ್ತನೆಗಳು ಹಾಗೂ ಆರೋಗ್ಯಕರವಾದ ವಾತವರಣದಲ್ಲಿ ಭಾಗಿಯಾಗಲು ಉತ್ಸುಕವಾಗುತ್ತದೆ. ಆ ಸಮಯದಲ್ಲಿ ಮಗುವಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುವ ಮೂಲಕ ಸ್ವಾತಂತ್ರ್ಯ ಮತ್ತು ಸೃಜನಾತ್ಮಕತೆಯನ್ನು ಶಿಕ್ಷಕಿಯರು ಉತ್ತೇಜಿಸಬೇಕು. ರಸಾಭಿಜ್ಞತೆ ಜೊತೆಗೆ ಕುತೂಹಲಗಳನ್ನು ಪ್ರೇರೇಪಿಸಬೇಕು. ಪೂರ್ಣ ಸ್ವಾತಂತ್ರ ಹಾಗೂ ಪ್ರೀತಿಯ ವಾತಾವರಣದಲ್ಲಿ ಸನ್ನಡತೆಯ ಮಾರ್ಗದರ್ಶನದಿಂದ, ಸದಾ ಕಾಲ ಮಗುವನ್ನು ಚಟುವಟಿಕೆಯಿಂದಿಟ್ಟು, ಪೂರ್ಣ ಬೆಳವಣಿಗೆಗೆ ನೆರವನ್ನು ನೀಡುವುದೆ, ಪೂರ್ವ ಪ್ರಾಥಮಿಕ ಶಿಕ್ಷಣದ ಬಹುಮುಖ್ಯ ಉದ್ದೇಶ. ಆ ಸಮಯದಲ್ಲಿ ಪರಿಸರ ಪ್ರೀತಿ, ಸಂಗ್ರಹಿಸುವ ಗುಣ, ಕಲ್ಪನೆ-ಊಹೆ-ನೆನಪಿನ ಶಕ್ತಿ ವೃದ್ಧಿ, ಪಾತ್ರಾಭಿನಯ, ಗೊಂಬೆಯಾಟ, ಚಿತ್ರ ಬರೆವುದು, ಬಣ್ಣ ಹಾಕುವುದು ಮೊದಲಾದ ಕಲೆ ಹಾಗೂ ಚಟುವಟಿಕೆಗಳಿಂದ ಕ್ರಿಯಾಶೀಲರನ್ನಾಗಿ ಶಾಲಾ ಪೂರ್ವ ಶಿಕ್ಷಣ ರೂಪಿಸುತ್ತದೆ.



ಮಗುವಿನ ಬೆಳವಣಿಗೆಯಲ್ಲಿ ಅತ್ಯಂತ ಮಹತ್ವದ ಕಾಲಘಟ್ಟವಾದ ಪೂರ್ವ ಪ್ರಾಥಮಿಕ ಶಿಕ್ಷಣದ ಕುರಿತು ನಾವು ಸಂಪೂರ್ಣವಾಗಿ ಹಾದಿ ತಪ್ಪುತ್ತಿದ್ದೇವೆ. ಅದಕ್ಕೆ ನೀಡಬೇಕಾದ ಆದ್ಯತೆಯನ್ನು ನೀಡುವಲ್ಲಿ ವಿಫಲರಾಗುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಸರಕಾರವೇ ನಡಸುವ 60ಸಾವಿರಕ್ಕೂ ಹೆಚ್ಚು ಅಂಗನವಾಡಿ ಕೇಂದ್ರಗಳಿವೆ. ಅವುಗಳು ಮೂಲ ಸೌಕರ್ಯಗಳಿಲ್ಲ ನರಳುತ್ತಿವೆ ಎಂಬ ವರದಿ ಇದೆ. ಶುದ್ಧವಾದ ಗಾಳಿ, ಸ್ವಚ್ಛವಾದ ನೀರು, ಉತ್ತಮ ಬೆಳಕು, ಶೌಚಾಲಯಗಳ ವ್ಯವಸ್ಥೆ ಸಮರ್ಪಕವಾಗಿಲ್ಲ. ಬಿರುಕು ಬಿಟ್ಟಿರುವ ಕಟ್ಟಡಗಳು ಇಲ್ಲವೇ ಬಯಲು ಪ್ರದೇಶಗಳಲ್ಲಿ ಅನೇಕ ಕೇಂದ್ರಗಳಿವೆ. ನಮ್ಮ ದೇಶದಲ್ಲಿ ಹಲವು ಕಡೆಗಳಲ್ಲಿ ಅಂಗನವಾಡಿಗಳು ಬಯಲಿನಲ್ಲಿವೆ ಎಂದು ಒಂದು ಎನ್.ಜಿ.ಓ. ದೃಢಪಡಿಸಿದೆ. ಇಲ್ಲಿ ಕೆಲಸ ನಿರ್ವಹಿಸುವ ಶಿಕ್ಷಕಿಯರಿಗೆ ಕೊಡುವ ವೇತನವೂ ಸಮಾಧಾನಕರವಾಗಿಲ್ಲ. ಈ ತರಹದ ನಾನಾ ಕಾರಣಗಳಿಂದ ಮಕ್ಕಳ ದಾಖಲಾತಿ ಪ್ರಮಾಣ ಹೆಚ್ಚಾಗಿ ಕಂಡು ಬರುತ್ತಿಲ್ಲ. ದೇಶದಲ್ಲಿ ಇದುವರೆಗೂ ಶೇ57ರಷ್ಟು ಮಕ್ಕಳು ಮಾತ್ರ ಪೂರ್ವ ಪ್ರಾಥಮಿಕ ಶಾಲೆಗೆ ದಾಖಲಾಗಿದ್ದಾರೆ. ಅವರಲ್ಲಿ ಶೇ32ರಷ್ಟು ಮಕ್ಕಳು ಮಾತ್ರ ಕ್ರಮಬದ್ಧ ಶಿಕ್ಷಣ ಪಡೆಯುತ್ತಿದ್ದಾರೆ. ಈ ಹಂತದಿಂದಲೇ ಶಾಲೆಯನ್ನು ಅರ್ಧಕ್ಕೆ ಬಿಡುವ ಪ್ರವೃತ್ತಿ ಕಂಡುಬರುತ್ತಿರುವುದು ಅಂಕಿ ಅಂಶಗಳ ಮೂಲಕ ಸ್ಪಷ್ಟವಾಗಿದೆ.

ನಮ್ಮ ಅಂಗನವಾಡಿ ಕೇಂದ್ರಗಳು ಕಲಿಕೆಗಿಂತ ಆರೋಗ್ಯದ ಕಡೆಗೆ ಹೆಚ್ಚು ಆದ್ಯತೆ ನೀಡುತ್ತಲಿವೆ. ನಿಜವಾಗಿ ಅಲ್ಲಿ ದೊರೆಯಬೇಕಾದ ಶಿಕ್ಷಣ ಸರಿಯಾದ ದಾರಿಯಲ್ಲಿ ಸಾಗುತ್ತಿಲ್ಲ. ಹಳ್ಳಿಗಳಲ್ಲಿ ಪೋಷಕರಿಗೂ ಪೂರ್ವ ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯತೆ ಕುರಿತು ಜಾಗೃತಿ ಮೂಡಿಲ್ಲ. ಮಕ್ಕಳನ್ನು ಮನ ಒಲಿಸಿ ಕರೆತಂದರೂ, ಮಧ್ಯಾಹ್ನ ಊಟ ನೀಡುವ ಕೇಂದ್ರಗಳೆಂದೆ ಬಹುತೇಕರು ಪರಿಗಣಿಸಿದ್ದಾರೆ. ಕೆಲವರು ಮ್ಕಕಳ ಗಲಾಟೆ ತಪ್ಪಿಸಿಕೊಳ್ಳಲು ಈ ಶಾಲೆಗೆ ಕಳುಹಿಸಿದರೆ, ಕೆಲವರು ಮನೆಯಲ್ಲಿ ನೋಡಿಕೊಳ್ಳುವವರಿಲ್ಲ ಎಂಬ ಕಾರಣಕ್ಕೆ ಕಳುಹಿಸುತ್ತಿದ್ದಾರೆ. ಇಂತಹ ಹಲವಾರು ಅಂಶಗಳಿಂದ ಈ ಕ್ಷೇತ್ರ ಸದಾ ನಿರ್ಲಕ್ಷಕ್ಕೆ ಒಳಗಾಗುತ್ತಲೇ ಇದೆ.

ನಗರ ಪ್ರದೇಶದಲ್ಲಿ ಹಲವಾರು ಖಾಸಗಿ ಸಂಸ್ಥೆಗಳು, ಎನ್.ಜಿ.ಓ.ಗಳು ಪೂರ್ವ ಪ್ರಾಥಮಿಕ ಶಿಕ್ಷಣದ ಶಾಲೆಗಳನ್ನು ಪ್ರಾರಂಭಿಸಿವೆ. ಅವರು ಡೇ ಕೇರ್ ಸೆಂಟರ್, ಅರ್ಲಿ ಲರ್ನಿಂಗ್ ಸೆಂಟರ್, ಪ್ಲೆ ಹೊಂ, ಶಿಶು ವಿಹಾರ, ನರ್ಸರಿ ಸ್ಕೂಲ್, ಎಲ್.ಕೆ.ಜಿ-ಯು.ಕೆ.ಜಿ ಮುಂತಾದ ಹೆಸರಿನಲ್ಲಿ ಶಾಲೆ ನಡೆಸುತ್ತಿವೆ. ಅವರಲ್ಲಿ ಬಹುತೇಕರು ಸೇವಾ ಮನೋಬಾವನೆಗಿಂತ ಹಣವನ್ನು ಮಾಡಿಕೊಳ್ಳುವ ಮಹತ್ತರ ಉದ್ದೇಶ ಹೊಂದಿದವರು. ಹಾಗಾಗಿ ಅವರು ಹೆಚ್ಚೆಚ್ಚು ಮಕ್ಕಳನ್ನು ದಾಖಲಿಸಿಕೊಳ್ಳುತ್ತಾ ದನದ ದೊಡ್ಡಿಯಂತೆ ಕೂಡಿಹಾಕುತ್ತಿರುವುದು ಎಲ್ಲರಿಗೆ ತಿಳಿದ ವಿಷಯ. ಕೆಲವೊಂದರಲ್ಲಿ ಗಾಳಿ-ಬೆಳಕು ಕೊರತೆಯಾದರೂ, ಇಂಗ್ಲೀಷ್ ವ್ಯಾಮೋಹದಿಂದ ಅಲ್ಲಿ ಸೇರಿಸುವವರಿಗೇನು ಕೊರತೆ ಇಲ್ಲ. ಅವುಗಳಲ್ಲಿ ಶಿಕ್ಷಕಿಯರಾಗಿ ನಿರುದ್ಯೋಗಿಗಳು, ಇಲ್ಲವೇ ಗೃಹಣಿಯರೇ ಕೆಲಸ ನಿರ್ವಹಿಸುತ್ತಿರುತ್ತಾರೆ. ಅವರಲ್ಲಿ ಬಹುತೇಕರು ತರಬೇತಿ ಪಡೆದಿರುವುದಿಲ್ಲ. ಕೆಲವರಿಗೆ ಇದು ಸಮಯ ಕಳೆಯಲು ಸಾಧನವಾದರೆ, ಇನ್ನು ಕೆಲವರಿಗೆ ಒಂದು ರೀತಿಯ ಹವ್ಯಾಸ.

ಇದಕ್ಕೆಲ್ಲ ಕಾರಣವೇನೆಂದರೆ ಈ ಕೇಂದ್ರಗಳನ್ನು ತೆರೆಯಲು-ಶಿಕ್ಷಕರ ನೇಮಕಾತಿ ಇತ್ಯಾದಿಗಳ ಬಗ್ಗೆ ಸರಿಯಾದ ನಿಯಮಗಳಿಲ್ಲ. ಹಾಗಾಗಿ ಆಟದ ಮೈದಾನ, ಆಟದ ಸಾಮಾಗ್ರಿ. . . . . . . ಇಂತಹ ಮೂಲ ಸೌಕರ್ಯಗಳು ಇಲ್ಲದೇ ಕೇಂದ್ರಗಳು ನಡೆಯುತ್ತಲಿವೆ. ಕೆಲವು ಪ್ರತಿಷ್ಠಿತ ಶಾಲೆಗಳು ಪೋಷಕರಿಗೆ ಮತ್ತು ಮಕ್ಕಳಿಗೆ ಪ್ರವೇಶ ಪರೀಕ್ಷೆ ನಡೆಸುತ್ತಿವೆ. ಆ ಎಳೆಯ ವಯಸ್ಸಿನಲ್ಲಿಯೇ ಮಕ್ಕಳು ಪರೀಕ್ಷೆ ಎದುರಿಸಬೇಕಾಗಿರುವುದು ದುರಂತವೇ ಸರಿ. ಬಹಳ ಮುಖ್ಯವಾದ ಇನ್ನೊಂದು ಅಂಶವೆಂದರೆ ಈ ಶಾಲೆಗಳು ತಮಗೆ ತೋಚಿದ ಪಠ್ಯಕ್ರಮ, ತಿಳಿದ ಬೋಧನಾ ಕ್ರಮ, ಅನುಕೂಲವಾದ ಮೌಲ್ಯಮಾಪನ ಕ್ರಮ ನಡೆಸುತ್ತಿರುವುದು ಇವುಗಳ ಮೇಲೆ ಸರ್ಕಾರದ ನಿಯಂತ್ರಣ ಇಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಸರಕಾರದ ಜಾರಿಗೆ ತಂದ "ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು" 6 ರಿಂದ 14 ವರ್ಷದ ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ. 6 ವರ್ಷಕ್ಕಿಂತ ಮುಂಚಿತ ಮ್ಕಕಳಿಗೂ ಅದನ್ನು ವಿಸ್ತರಿಸಲು ಹಿಂದೇಟು ಹಾಕಿರುವುದರ ಮರ್ಮ ಗೊತ್ತಾಗುತ್ತಿಲ್ಲ. ಆದರೆ ಎನ್ ಇ ಪಿ ಯಲ್ಲಿ ಈ ವಯೋಮಾನವನ್ನು ಪರಿಗಣಿಸಿದ್ದರೂ ಸರಿಯಾದ ಮಾರ್ಗಸೂಚಿ ಇಲ್ಲ. ಆ ನಿಟ್ಟಿನತ್ತ ಗಂಭೀರ ಚರ್ಚೆಗಳು ನಡೆಯಬೇಕಿವೆ.

ನಾವು ಮಕ್ಕಳ ಶಿಕ್ಷಣದ ಆರಂಭ ಹಂತವನ್ನು ನಿರ್ಲಕ್ಷಿಸುವುದು ತರವಲ್ಲ. ಅದರಲ್ಲೂ ಗ್ರಾಮೀಣ ಮಕ್ಕಳನ್ನು ಪ್ರಸ್ತುತ ಸ್ಪರ್ಧಾತ್ಮಕ ದಿನಕ್ಕೆ ಸಿದ್ಧಗೊಳಿಸುವಾಗ ಅಂಗನವಾಡಿಗಳನ್ನು ಅಲಕ್ಷಿಸುವುದು ಸಲ್ಲದು. ಅಂಗನವಾಡಿ ಕೇಂದ್ರಕ್ಕೆ ಗ್ರಾಮದ ಎಲ್ಲಾ ಮಕ್ಕಳು ಬರುವಂತೆ ನೋಡಿಕೊಳ್ಳಲು ಯೋಜನೆ-ಯೋಚನೆ ಮಾಡಬೇಕಿದೆ. ಅಗತ್ಯ ಸೌಲಭ್ಯಗಳನ್ನು ನೀಡುವ ಬಗೆಗೆ, ಶಿಕ್ಷಕಿಯರ ನೇಮಕ, ಆಕರ್ಷಕ ವೇತನ, ಪಾಲಕರಲ್ಲಿ ಜಾಗೃತಿ ಮೂಡಿಸುವತ್ತ ಗಮನಹರಿಸಬೇಕಿದೆ. ಪೂರ್ವ ಪ್ರಾಥಮಿಕ ಶಿಕ್ಷಣದಲ್ಲಿರುವ ಇಂತಹ ಸಮಸ್ಯೆಗಳ ವ್ಯಾಧಿಯನ್ನು ನೀಗಿಸುವುದು ಇಂದಿನ ದಿನಗಳಲ್ಲಿ ಬಹುದೊಡ್ಡ ಸವಾಲು. ಜೊತೆಗೆ ಸರಕಾರಿ ಶಾಲೆಯಲ್ಲಿ ಆಂಗ್ಲಭಾಷೆಯ ಎಲ್.ಕೆ.ಜಿ./ಯು.ಕೆ.ಜಿಗಳನ್ನು ಪ್ರಾರಂಭಿಸಿರುವುದರ ಕುರಿತು ತಜ್ಞರು ಅಧ್ಯಯನವನ್ನು ಕೈಗೊಂಡು ಸಾಧಕ-ಬಾಧಕಗಳನ್ನು ಮುನ್ನೆಲೆಗೆ ತರಬೇಕಿದೆ. ಆ ಮೂಲಕ ಇನ್ನು ಮುಂದಾದರೂ ನಾವು ಎಚ್ಚೆತ್ತು ಪ್ರಜ್ಞಾವಂತರಂತೆ ವರ್ತಿಸದಿದ್ದಲ್ಲ, ನಮ್ಮ ಮಕ್ಕಳು ಹಾಗೂ ದೇಶದ ಭವಿಷ್ಯವನ್ನು ನಾವೇ ವಿನಾಶದಂಚಿನತ್ತ ತಳ್ಳಿದಂತಾಗುತ್ತದೆ.

## ತೋಟಗಾರಿಕೆ ತರಬೇತಿಗೆ ಅರ್ಜಿ ಆಹ್ವಾನ

**ಮೊದಲ ಪುಟದಿಂದ**

ಸಾಮಾನ್ಯ ಅಭ್ಯರ್ಥಿಗಳು 30 ರೂ., ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು 15 ರೂ.ಗಳ ಪೋಷ್ಟಲ್ ಆರ್ಡರ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಅನ್ನು ವಿಜಯನಗರದ ತೋಟಗಾರಿಕೆ ಉಪನಿರ್ದೇಶಕರ ಹೆಸರಿನಲ್ಲಿ ಪಡೆದು ಅರ್ಜಿ ಜೊತೆಗೆ ಲಗತ್ತಿಸಿ ಸಲ್ಲಿಸಬೇಕು. ಅರ್ಜಿಗಳನ್ನು ತೋಟಗಾರಿಕೆ ಇಲಾಖೆಯ ಕಚೇರಿಗಳಲ್ಲಿ ಅಥವಾ ಇಲಾಖಾ ವೆಬ್ ಸೈಟ್ http://horticulturedir.karnataka.gov.in ಮೂಲಕ ಪಡೆದು ಭರ್ತಿ ಮಾಡಿ ಅರ್ಜಿಗಳನ್ನು ಆಯಾ ತೋಟಗಾರಿಕೆ ಉಪನಿರ್ದೇಶಕರು, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ವಿಜಯನಗರ ಹೊಸಪೇಟೆ ಕಚೇರಿಗೆ ಸಲ್ಲಿಸಬಹುದು.

ಜೂನ್ 6ರಂದು ಬೆಳಿಗ್ಗೆ 11 ಗಂಟೆಗೆ ವಿಜಯನಗರದ ತೋಟಗಾರಿಕೆ ಉಪನಿರ್ದೇಶಕರು (ಜಿ.ಪಂ) ಹೊಸಪೇಟೆ ಕಚೇರಿಯಲ್ಲಿ ಸಂದರ್ಶನ ಇದ್ದು, ಸಂದರ್ಶನಕ್ಕೆ ಎಲ್ಲಾ ಮೂಲ ದಾಖಲೆಗಳೊಂದಿಗೆ ಹಾಜರಾಗಬೇಕು. ಇದಕ್ಕಾಗಿ ಪ್ರತ್ಯೇಕ ಸಂದರ್ಶನ ಪತ್ರವನ್ನು ಕಳುಹಿಸಲಾಗುವುದಿಲ್ಲ ಎಂದು ತೋಟಗಾರಿಕೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಇಲಾಖೆಯನ್ನು ಸಂಪರ್ಕಿಸಬಹುದಾಗಿದೆ.

## ಇಂದು ಬಳ್ಳಾರಿ ನಗರದಲ್ಲಿ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ನಗರ ಜೆಸ್ಕಾಂ ಉಪವಿಭಾಗ-1 ರ ವ್ಯಾಪ್ತಿಗೆ ಬರುವ 110/11 ಕೆವಿ ಸೌತ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 25 ರಂದು ಬೆಳಿಗ್ಗೆ 07 ರಿಂದ ಮಧ್ಯಾಹ್ನ 03 ಗಂಟೆಯವರೆಗೆ ಎಫ್-23 ಫೀಡರ್ ವ್ಯಾಪ್ತಿಯ ಮೋತಿ ವೃತ್ತ, ತೇರು ಬೀದಿ, ಜೈನ್ ಮಾರ್ಕೆಟ್, ಕಾಳಮ್ಮ ಸ್ಟ್ರೀಟ್, ಲಾರಿ ಟರ್ಮಿನಲ್, ರಂಗಮಂದಿರ, ಹೊಸ ಬಸ್‌ನಿಲ್ದಾಣ, ಬಂಡಿಮೋಟ, ಗೊಲ್ಲರಹಟ್ಟಿ ಮತ್ತು ಮಾರುತಿ ಕಾಲೋನಿ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಇ.ಟಿ.ಲಕ್ಷ್ಮೀ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕವಿ ಮನಸು

### ಚಂಚಲ ಬದುಕು

ಬಾಲ್ಯವದು ಬಹು ಚಂಚಲ,
ಮನಸ್ಸು ಹೊಯ್ದಾಡುವುದು,
ಆಸೆ ಗರಿ ಬಿಚ್ಚಿ ಗೆದರುವುದು,
ಕಂಡಾಗ ಹೊಸತು ಪ್ರತಿಸಲ.

ಕ್ಷಣಕ್ಕೊಂದು ಚಿತ್ತ, ವಿಚಿತ್ರ,
ಆಸೆಗಳು ಬಲು ವೈಪರಿತ್ಯ,
ಕ್ಷಣ ನಗು, ಕ್ಷಣ ನೋವು,
ಅನ್ನಿಸಿದ್ದು ಸಿಗಲೇಬೇಕೆಂಬ,
ಕಾತರವದು ಮೂಡುವುದು.

ಬಯಸಿದ್ದು ದಕ್ಕಿದ ನಂತರ
ಪಡೆದದ್ದು ವ್ಯರ್ಥವೆನಿಸುವುದು,
ಹೊಸತು ಕಂಡೊಡನೆ ಮನ,
ಅದಕ್ಕಾಗಿ ಹಂಬಲಿಸುವುದು.

ಬಾಲ್ಯವದು ನೋವನ್ನು,
ಬೇಗ ಮರೆತು ಬಿಡುವುದು.
ಇನ್ನೇನೋ ತುಸು ಸಿಕ್ಕಾಗ
ಮನ ಸಂತೃಪ್ತವಾಗುವುದು.

ಹರೆಯವದು ಹುಚ್ಚು ಕುದುರೆ,
ಮನಸದು ಹದ ತಪ್ಪುವುದು.
ಸರಿಯಾದ ದಾರಿ ಸಿಗದಿದ್ದರೆ,
ಬದುಕಿನ ಹಳಿ ಜಾರುವುದು.

ಮೂಡುವ ಕನಸಿಗೊಂದು,
ಸೂತ್ರವ ಕಟ್ಟಿದರೆ ಮಾತ್ರ,
ಕನಸಿನ ಗಾಳಿಪಟ ನನಸಾಗಿ,
ವಿಹಂಗಮ ನಭದಿ ತೇಲುವುದು.

ಯೌವ್ವನದಿ ಎಲ್ಲವ ಗೆಲ್ಲುವ,
ಛಲ ತಾನೇ ಉದಿಸುವುದು.
ಎಲ್ಲವೂ ತನ್ನ ಅಂಕೆಯೊಳಗಿದೆ,
ಎಂದು ತನಗೆ ಭಾಸವಾಗುವುದು.

ಬಿಟ್ಟರೆ ಮತ್ತೆ ಕಳೆದುಕೊಳ್ಳುವ ,
ಭೀತಿ ಒಳಗೊಳಗೇ ಮೂಡುವುದು,
ಕ್ಷುಲ್ಲಕ ಆಸೆ ವಿಚಾರಗಳ ಹಿಂದೆ,
ಮನಸ್ಸು ಭರದಿಂದ ಓಡುವುದು.

ಪ್ರಾಯ ಮಾಗಿದ ಹಾಗೆ,
ಚಂಚಲತೆ ಹೋಗುವುದು.
ಬದುಕದು ಅರಿವಾಗುವ ವೇಳೆಗೆ,
ಒಳಿತು ಕೈ ಜಾರಿ ಹೋಗಿರುವುದು.

ವೃದ್ಧಾಪ್ಯದಲ್ಲಾದರೂ ಆಗಬೇಕು,
ಮನುಜ ಜ್ಞಾನದಿಂದಲೂ ವೃದ್ಧ,
ಇಲ್ಲದಿದ್ದರೆ ಆಗುವನು ಅವನು,
ಬರಿ ವಯಸ್ಸಾದ ಮರುಳಸಿದ್ದ.

– ಮಮತಾ ಶೃಂಗೇರಿ

### ಜಗನ್ಮಾತೆ ಮಹಾದೇವಿ ಅಕ್ಕ

ಚಲುವಿನ ಅರಗಣಿ ಅಕ್ಕ
ಭವಿ ಕೌಶಿಕ ಪ್ರೇಮ ಪಾಶದ ಅಕ್ಕ
ಕೌಶಿಕ ಪತಿತ್ವ ಒಲ್ಲೆಂದ ಅಕ್ಕ
ಜಗನ್ಮಾತೆ ಮಹಾದೇವಿ ಅಕ್ಕ

ಉಡುತಡಿಯ ಅಕ್ಕ
ಉಡುವುದ ತಡೆದ ಅಕ್ಕ
ಕೇಶಾಂಬರ ಉಡುಗೆಯ ಅಕ್ಕ
ಜಗನ್ಮಾತೆ ಮಹಾದೇವಿ ಅಕ್ಕ

ಬಾಲ್ಯದಿ ಶರಣ ಸಖ್ಯದ ಅಕ್ಕ
ಸದಾ ಶಿವಾರ್ಚನೆಯ ಅಕ್ಕ
ಗುರುಲಿಂಗದೇವ ಶಿಷ್ಯೆ ಅಕ್ಕ
ಜಗನ್ಮಾತೆ ಮಹಾದೇವಿ ಅಕ್ಕ

ಹರೆಯ ಚಲುವಿನ ಅಕ್ಕ
ಕೌಶಿಕ ಪ್ರೇಮ ಪಾಶ ಕಿತ್ತ ಅಕ್ಕ
ಸಾವ ಕೇಡ ಪತಿ ಒಲ್ಲೆಂದ ಅಕ್ಕ
ಜಗನ್ಮಾತೆ ಮಹಾದೇವಿ ಅಕ್ಕ

ಕನಸೊಂದ ಕಂಡ ಅಕ್ಕ
ಶಿವನೇ ಗಂಡನಾಗಿ ಕಂಡ ಅಕ್ಕ
ಭವಿ ಗಂಡರ ಒಲೆಗಿಕ್ಕಿದ ಅಕ್ಕ
ಜಗನ್ಮಾತೆ ಮಹಾದೇವಿ ಅಕ್ಕ

ಶರಣ ಅನುಭವ ಮಂಟಪದಕ್ಕ
ಅಲ್ಲಮರ ಪರೀಕ್ಷೆಲಿ ಜಯದ ಅಕ್ಕ
ಚನ್ನಮಲ್ಲಿಕಾರ್ಜುನ ವಚನದಕ್ಕ
ಜಗನ್ಮಾತೆ ಮಹಾದೇವಿ ಅಕ್ಕ

ದೇವ ಸಾಕ್ಷಾತ್ಕಾರದ ಅಕ್ಕ
ಶ್ರೀಶೈಲದ ಕದಳಿಯ ಅಕ್ಕ
ಚನ್ನಮಲ್ಲಿಕಾರ್ಜುನಲಿ ಐಕ್ಯದ ಅಕ್ಕ
ಜಗನ್ಮಾತೆ ಮಹಾದೇವಿ ಅಕ್ಕ

– ಸೋ.ದಾ.ವಿರೂಪಾಕ್ಷಗೌಡ
ಹೊಸಪೇಟೆ, ವಿಜಯನಗರ ಜಿಲ್ಲೆ

# ವಚನವೊಂದಕ್ಕೆ ಮಹಾವ್ಯಾಖ್ಯಾನ

**ಬಸವ ಜಯಂತಿ ಅಂಗವಾಗಿ ಕಳೆದ ವರ್ಷ ಹೊಸಪೇಟೆ ಬಸವ ಬಳಗದ ವತಿಯಿಂದ ಬಸವೇಶ್ವರ ಬಡಾವಣೆಯಲ್ಲಿ ಏರ್ಪಡಿಸಿದ್ದ ಜೀವನದ ದರ್ಶನ ಪ್ರವಚನ ಕಾರ್ಯಕ್ರಮ ನಡೆಸಿಕೊಟ್ಟ ಮಹಾಮಠ ಬಸವ ಸೇವಾ ಪ್ರತಿಷ್ಠಾನ ಬೀದರ್ ಇದರ ಅಧ್ಯಕ್ಷರಾಗಿದ್ದ ಪೂಜ್ಯ ಅಕ್ಕ ಅನ್ನಪೂರ್ಣ ತಾಯಿಯವರು ವಚನವೊಂದಕ್ಕೆ ಒಂದು ಸಾವಿರ ಪುಟಗಳ ವ್ಯಾಖ್ಯಾನವನ್ನು ಬರೆದಿದ್ದಾರೆ. ಆ ಕೃತಿಗೆ ಕನ್ನಡ ವಿಶ್ವವಿದ್ಯಾಲಯದ ಹಿರಿಯ ಸಂಶೋಧಕರಾದ ಪ್ರೊ ಕೆ ರವೀಂದ್ರನಾಥ ಅವರು ಬರೆದ ಮುನ್ನುಡಿಯನ್ನು ಲಿಂಗೈಕರಾದ ಸಂದರ್ಭದಲ್ಲಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಹಂಪಿ ಟೈಮ್ಸ್ ಪತ್ರಿಕೆ ಪ್ರಕಟಿಸದೆ**

12ನೆಯ ಶತಮಾನದಲ್ಲಿ ರಚನೆಯಾದ ವಚನಸಾಹಿತ್ಯದ ಅಧ್ಯಯನ ಇಂದಿನವರೆಗೂ ಮುಂದುವರೆಯಿತು. ಮುಂದೆಯೂ ಬೇರೆ ಬೇರೆ ನೆಲೆಯಲ್ಲಿ ಅಧ್ಯನಕಾರರಿಗೆ ಆಕರ ಸಾಮಗ್ರಿಯಾಗಿ ವಚನಸಾಹಿತ್ಯ ಬಳಕೆಯಾಗುವುದರಲ್ಲಿ ಸಂದೇಹವಿಲ್ಲ. ಕನ್ನಡ ಸಾಹಿತ್ಯ ಪ್ರಕಾರವಾದ ವಚನಸಾಹಿತ್ಯದ ಪ್ರಾಚೀನ ಅಧ್ಯಯನ ಘಟ್ಟಗಳನ್ನು ಸ್ಥೂಲವಾಗಿ 1. ವಚನಸಾಹಿತ್ಯ: ಸೃಜನಶೀಲಘಟ್ಟ 2. ವಚನಸಾಹಿತ್ಯ ಚರಿತ್ರೆ ನಿರ್ಮಾಣಘಟ್ಟ 3. ವಚನಸಾಹಿತ್ಯ: ಸಂಯೋಜನಾಘಟ್ಟ ಎಂದು ಗುರುತಿಸಬಹುದು.

1. ವಚನಸಾಹಿತ್ಯ ಸೃಜನಘಟ್ಟ: ಮೂಲತಃ ಸಾಹಿತ್ಯೇತರ ಉದ್ದೇಶಗಳಿಗಾಗಿ ರಚನೆಯಾದ ವಚನಸಾಹಿತ್ಯ ಕನ್ನಡದ ಅಪೂರ್ವ ಸಾಹಿತ್ಯ ಪ್ರಕಾರ. ಶಿವಶರಣರ ಸಮಾಜೋ–ಧಾರ್ಮಿಕ ಚಳುವಳಿಯ ಮಾಧ್ಯಮವಾದದ್ದು ವಿಶೇಷ. ಅರ್ಥ–ಭಾವ, ನಡೆ–ನುಡಿ, ಸಾಮಾಜಿಕ ಹೊಣೆಗಾರಿಕೆ, ಅಭಿವ್ಯಕ್ತಿ ಸ್ವಾತಂತ್ರ್ಯಗಳಿಂದ ಭಕ್ತಿಸುಭಾಷಿತಗಳಾಗಿ, ಸಾಮಾಜಿಕ ಬದುಕಿನ ಸಾಕ್ಷಿಪ್ರಜ್ಞೆಗಳಾಗಿ ವಚನಗಳು ರಚನೆಯಾಗಿವೆ. ವಚನಗಳು ಓದಲು ಸರಳ, ಅವುಗಳನ್ನು ಅರ್ಥೈಸುವುದು, ಅದರಂತೆ ನಡೆಯುವುದು ಅಷ್ಟು ಸುಲಭವಲ್ಲ. ವಚನಗಳು ಅರಣ್ಯದಂತೆ ವೈವಿಧ್ಯಮಯ ಹಾಗೂ ನಭೋಮಂಡಲದಂತೆ ಕುತೂಹಲಕಾರಿ. ಇಲ್ಲಿ ಸಾಮಾಜಿಕ ಪ್ರಜ್ಞೆ, ಪ್ರಭುತ್ವ ನಿರಾಕರಣೆ, ಧಾರ್ಮಿಕ ಪರಿಕಲ್ಪನೆ, ಕಾಯಕ–ದಾಸೋಹ ತತ್ವ ಪ್ರತಿಪಾದನೆ, ವರ್ಗ–ವರ್ಣ–ಲಿಂಗಸಮಾನತೆ, ಅರಿವು–ಆಚಾರ–ಅನುಭಾವದ ನುಡಿಗಳಿಂದ ಕೂಡಿದ ವಚನಗಳನ್ನು ನೂರಾರು ಶರಣರು ರಚಿಸಿದರು. ಇದು ವಚನಸಾಹಿತ್ಯದ ಸೃಜನಘಟ್ಟವೆನಿಸಿದೆ.

2. ವಚನಸಾಹಿತ್ಯ: ಚರಿತ್ರೆ ನಿರ್ಮಾಣಘಟ್ಟ:– ಮುಂದಿನ ಕೆಲವು ಶರಣಕವಿಗಳು ಶರಣರ ಚರಿತ್ರೆಯನ್ನು ಕಾವ್ಯ ಪುರಾಣಗಳ ಮೂಲಕ ನಿರೂಪಿಸಿದ್ದಾರೆ. ಇವರ ಕೃತಿರಚನೆಗೆ ಶರಣರ ವಚನಗಳ ತಾತ್ವಿಕತೆಯೇ ಆಧಾರ. ಹರಿಹರನ ರಗಳೆಗಳು, ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿ, ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣ, ಚಾಮರಸನ ಪ್ರಭುಲಿಂಗಲೀಲೆ, ಭೀಮಕವಿಯ ಬಸವಪುರಾಣ, ಚನ್ನಪ್ಪ ಕವಿಯ ಶರಣಲೀಲಾಮೃತ, ಸಿಂಗಿರಾಜನ ಅಮಲಬಸವ ಚಾರಿತ್ರ್ಯ ಮುಂತಾದ ಕಾವ್ಯ ಪುರಾಣಗಳು ಶರಣರ ವಚನಗಳನ್ನಾಧರಿಸಿ ರಚಿಸಲ್ಪಟ್ಟ ಶಿವಶರಣರ ಚರಿತ್ರೆಗಳೇ ಆಗಿವೆ. ಇದು ವಚನಸಾಹಿತ್ಯದ ಚರಿತ್ರೆ ನಿರ್ಮಾಣಘಟ್ಟವೆನಿಸಿದೆ.

3. ವಚನಸಾಹಿತ್ಯ ಸಂಯೋಜನಾಘಟ್ಟ:– ಕಲ್ಯಾಣಕ್ರಾಂತಿಯ ಪರಿಣಾಮವಾಗಿ ನಾಡಿನಾದ್ಯಂತ ಹರಿದು ಹಂಚಿ ಹೋಗಿ ನೆಲದ ಮರೆಯ ನಿಧಾನದಂತೆ ಮರೆಯಾಗಿದ್ದ ವಚನಸಾಹಿತ್ಯವನ್ನು ಶೋಧಿಸಿ ಸಂಗ್ರಹಿಸುವ, ಸಂಕಲಿಸುವ ಹಾಗೂ ಸಂಪಾದಿಸುವ ಕಾರ್ಯ ನಾಡಿನಾದ್ಯಂತ ಭರದಿಂದ ನಡೆಯಿತು. ಈ ಕಾರ್ಯವನ್ನು ವಿದ್ವಾಂಸರು ವಚನ ಸಂಯೋಜನಾ ಘಟ್ಟವೆಂದು ಕರೆದಿದ್ದಾರೆ.



ಡಾ. ಕೆ.ರವೀಂದ್ರನಾಥ ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಯ ಹಂಪಿ,

Hampi Times E-paper
SCAN AND READ

ಶರಣರ ವಚನಗಳ ಸಂಗ್ರಹಕಾರ್ಯ 12ನೆಯ ಶತಮಾನದಲ್ಲಿಯೇ ಕೆಲವರಿಂದ ನಡೆಯಿತೆಂಬ ಅಭಿಪ್ರಾಯವಿದೆಯಾದರೂ ಶಿಸ್ತುಬದ್ಧವಾದ ಆಯಾಮ ದೊರೆತದ್ದು 15ನೆಯ ಶತಮಾನದಲ್ಲಿ. ಯಾವುದೇ ತಾತ್ವಿಕ ಉದ್ದೇಶವಿಲ್ಲದೆ ಒಬ್ಬೊಬ್ಬ ವಚನಕಾರನ ಹೆಸರಿನಲ್ಲಿ ಆತನ ವಚನಗಳನ್ನು ಕೂಡಿಹಾಕಿದ್ದನ್ನು ವಚನಸಂಗ್ರಹ ಎನ್ನುತ್ತೇವೆ. ಈ ಸಂಗ್ರಹ ಕಟ್ಟುಗಳಲ್ಲಿ ಎಲ್ಲ ಪುರಾತನರ ವಚನ ಸಂಗ್ರಹ ಹಾಗೂ ಏಕಪುರಾತನ ವಚನಸಂಗ್ರಹ ಕಟ್ಟುಗಳೆಂದು ಎರಡು ರೀತಿಯಲ್ಲಿ ಲಭ್ಯವಿವೆ. ಎಲ್ಲ ಪುರಾತನರ ವಚನ ಕಟ್ಟುಗಳಲ್ಲಿ ಕೋಲಶಾಂತಯ್ಯನ ವಚನಗಳಿಂದ ಆರಂಭವಾಗುವ 40 ವಚನಕಾರರ 3293 ವಚನಗಳ ಕಟ್ಟು, ಗೊಗ್ಗವ್ವೆಯ ವಚನಗಳಿಂದ ಆರಂಭವಾಗುವ 125 ವಚನಕಾರರ 1600 ವಚನಗಳ ಕಟ್ಟು, ಬಸವಣ್ಣನ ವಚನಗಳಿಂದ ಆರಂಭವಾಗುವ 87 ವಚನಕಾರರ 1000 ವಚನಗಳ ಕಟ್ಟು ಸಂಗ್ರಹಗೊಂಡಿವೆ. ಸಿದ್ಧರಾಮ, ಅಕ್ಕಮಹಾದೇವಿ, ಗಣದಾಸಿ ವೀರಣ್ಣ ಮುಂತಾದ ಶರಣರ ವಚನಗಳ ಬಿಡಿ ಬಿಡಿಯಾದ ಕಟ್ಟುಗಳು ಲಭ್ಯವಿವೆ.–ಇದು ವಚನಸಾಹಿತ್ಯದ ಸಂಗ್ರಹ ಸಮಯವೆನಿಸಿತು.

ಸಂಗ್ರಹಗೊಂಡ ವಚನಗಳನ್ನು ಒಂದು ತಾತ್ವಿಕ ಅಥವಾ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಜೋಡಿಸುವ ಉಪಕ್ರಮವನ್ನು ವಚನ ಸಂಕಲನ ಎಂದು ಕರೆಯುತ್ತೇವೆ. ಸಂಕಲನವೆಂದರೆ ಕೂಡಿಸುವುದು ಮಾತ್ರವಲ್ಲ ಆಯ್ಕೆಮಾಡಿಕೊಂಡ ವಿಷಯಕ್ಕೆ ಸಂಬಂಧಿಸಿದ ವಚನಗಳನ್ನು ಜೋಡಿಸುವುದೆಂದರ್ಥ. ಷಟ್ಸ್ಥಲ ವಚನಗಳು, ಶಿವಯೋಗಸಂಬಂಧಿ ವಚನಗಳು ಹೀಗೆ ಸ್ಥಲಕಟ್ಟಿನ ವಚನಗಳನ್ನು ಜೋಡಿಸಿದರು. ಬಸವಣ್ಣನ ಷಟ್‌ಸ್ಥಲದ ವಚನಗಳು, ಪ್ರಭುದೇವರ ಷಟ್‌ಸ್ಥಲದ ವಚನಗಳು ಇತ್ಯಾದಿಯಾಗಿ ಮುಂದುವರೆದು ವಚನ–ಸ್ವರವಚನಗಳನ್ನು ಬಳಸಿಕೊಂಡು ಏಕೋತ್ತರ ಷಟ್‌ಸ್ಥಲ ಕಟ್ಟುಗಳು ಸಿದ್ಧಗೊಂಡವು. ಹುಲಿಗೆರೆಯ ಮಹಾಲಿಂಗ, ಜಕ್ಕಣಾರ್ಯ, ಗುಬ್ಬಿಮಲ್ಲಣಾರ್ಯ, ಕಲ್ಲುಮಠದ ಪ್ರಭುದೇವ ಮುಂತಾದವರ ವಚನಗಳನ್ನು ಸ್ಥಲಗಳ ತಾತ್ವಿಕತೆಗೆ ಜೋಡಿಸಿ ಅವುಗಳಿಗೆ ಟೀಕೆ–ವ್ಯಾಖ್ಯಾನ–ವಿವರಣೆ ಬರೆದರು. ಬಸವಣ್ಣನವರ ವಚನಗಳಿಗೆ ಆ ಕಾಲಕ್ಕೆ ಸೋಮಶೇಖರ ಶಿವಯೋಗಿ, ಗುರುಬಸವದೇವ,



ಪರ್ವತಶಿವಯೋಗಿ, ರೇವಣಸಿದ್ಧಸ್ವಾಮಿ ಮತ್ತು ಹುಮ್ನಾಬಾದಿನ ನಿರಂಜನಸ್ವಾಮಿಗಳೆಂಬ 5 ಜನ ಟೀಕಾಕಾರರು ಟೀಕುಗಳನ್ನು ಬರೆದಿದ್ದಾರೆ. ಮುಕ್ತ ರಚನೆಗಳಾಗಿದ್ದ ವಚನಗಳು ಸಂಕಲನಕಾರರಿಂದ ತಾತ್ವಿಕತೆಯ ಬಂಧಕ್ಕೆ ಒಳಗಾದವು– ಇದು ವಚನಸಾಹಿತ್ಯದ ಸಂಕಲನ ಸಮಯವೆನಿಸಿತು.

ವಚನಗಳನ್ನು ಸಂವಾದಕ್ಕೆ ಒಳಪಡಿಸಿದ ಕೃತಿಗಳು ಸಂಪಾದನೆ ಎನಿಸುತ್ತವೆ. ಸಂಪಾದನೆಯೆಂದರೆ ಗಳಿಕೆ ಎಂಬರ್ಥವಿದೆಯಾದರೂ ಸಂವಾದ ಎಂಬ ವಿಶೇಷ ಅರ್ಥವಿರುವುದನ್ನು ಗಮನಿಸಬೇಕು. ಈ ಅರ್ಥದಲ್ಲಿ ಶೂನ್ಯಸಂಪಾದನೆಗಳು ಶರಣರ ವಚನಗಳನ್ನು ಸಂವಾದ ರೂಪದಲ್ಲಿ ಹೆಣೆದಿರುವ ವಿನೂತನ ಪ್ರಯೋಗಗಳಾಗಿವೆ. ಶಿವಗಣಪ್ರಸಾದಿಮಹಾದೇವಯ್ಯ, ಹಲಗೆಯಾರ್ಯ, ಗುಮ್ಮಳಾಪುರದ ಸಿದ್ಧಲಿಂಗದೇವರು ಹಾಗೂ ಗೂಳೂರು ಸಿದ್ಧವೀರಣ್ಣೊಡೆಯರು ರಚಿಸಿದ



4 ಶೂನ್ಯಸಂಪಾದನೆಗಳು ಉಪಲಬ್ಧವಿವೆ. ಶೂನ್ಯಸಂಪಾದನೆ ಶಿವಶರಣರು ಆದ್ಯಾತ್ಮ ಪ್ರಪಂಚಕ್ಕೆ ನೀಡಿದ ವಿನೂತನ ಕೊಡುಗೆ. ಏನೆಲ್ಲವನ್ನು ಒಳಗೊಂಡ, ಎಲ್ಲವನ್ನೂ ತನ್ನೊಳಗೆ ಅಡಗಿಸಿಕೊಂಡ 'ಬಯಲು' 'ನಿರವಯ' ಎಂಬ ಆಧ್ಯಾತ್ಮ ಅರ್ಥವನ್ನು ಹೇಳಲಾಗಿದೆ. ತೋಂಟದ ಸಿದ್ಧಲಿಂಗೇಶ್ವರರ ಪ್ರಕಾರ "ಚರಾಚರ ಸೃಷ್ಟಿರಚನೆಗೆ ಕಾರಣವಾದದ್ದು ನಿಷ್ಕಲಲಿಂಗ, ಈ ನಿಷ್ಕಲಲಿಂಗದ ನಾದ–ಬಿಂದು–ಕಳೆಗಳೆಂಬ ಜ್ಞಾನ ಚಿತ್ತುವೇ ಮಹಾಲಿಂಗ. ಈ ಮಹಾಲಿಂಗದಿಂದ ಆತ್ಮಹೊಮ್ಮಿ ಆಕಾಶ, ವಾಯು, ಪೃಥ್ವಿ, ಅಗ್ನಿ, ಜಲಗಳುದಯಿಸಿ ಸೃಷ್ಟಿರಚನೆಗೆ ಕಾರಣವಾಯಿತು. ಇವೆಲ್ಲವೂ ಏನೇನೂ ಇಲ್ಲದಂದು ತಾನೇತಾನಾದ ಮಹಾಘನವೇ ಮಹಾಶೂನ್ಯ. ಅದೇ ಮಹಾಬಯಲು. ಶರಣರ ವಚನಗಳ ಅನುಭಾವವೆಂದರೆ ಎಲ್ಲವನ್ನೂ ಒಳಗೊಂಡಿದ್ದ ಅಗೋಚರ, ಅಗಮ್ಯ, ಅಪ್ರತಿಮ, ಅನುಪಮ, ಅನಾಹತ, ಅಪರಿಮಿತವಾದ ಅಖಂಡ ಮಹಾಘನ ವಸ್ತುವೇ ಶೂನ್ಯತತ್ವ. ಈ ತತ್ವವನ್ನು ತನ್ನದಾಗಿ ಮಾಡಿಕೊಳ್ಳುವುದು ಅಥವಾ ಸಂಪಾದಿಸುವುದು ಶೂನ್ಯಸಂಪಾದನೆ".

ಲಿಂಗಾಯತ ಧರ್ಮದ ಆತ್ಮ ಅನುಭಾವ. ಈ ಅನುಭಾವ ಸಂಸ್ಕೃತಿಯನ್ನು ಪುನರುಜ್ಜೀವನ ಗೊಳಿಸುವುದಕ್ಕಾಗಿ ಉದಯಿಸಿದ ದ್ವಿತೀಯ ಅಲ್ಲಮ ತೋಂಟದಸಿದ್ಧಲಿಂಗ ಶಿವಯೋಗಿಗಳು. ಕೇಂದ್ರೀಯ ರೂಪದ ಕಲ್ಯಾಣದ ಅನುಭವ ಮಂಟಪವನ್ನು ವಿಕೇಂದ್ರಿಕರಣಗೊಳಿಸಿದರು. ಇದರಿಂದ ಇವರ ನೇತೃತ್ವದಲ್ಲಿ ಏಳುನೂರು ಜನ ಶಿಷ್ಯರು ವಿರಕ್ತದೀಕ್ಷೆ ಹೊಂದಿ "ಎಲ್ಲೆಡೆಯೂ ಸಂಚಾರ–ಶರಣತತ್ವ ಪ್ರಚಾರ" ಆಂದೋಲನವೆನ್ನುವಂತೆ ಶರಣರ ವಿಚಾರಗಳನ್ನು ಪ್ರಸಂಗ ರೂಪದಲ್ಲಿ ಮನೆಮನೆಗೆ–ಊರೂರಿಗೆ ಪ್ರಸಾದಿಸಿದರು. ಈ ಪ್ರಸಂಗಗಳೇ ಸಂಭಾಷಣೆಯುಕ್ತ ದೃಶ್ಯ–ಶ್ರವ್ಯ ಸ್ವರೂಪದ ಶೂನ್ಯಸಂಪಾದನೆಗಳು ರಚನೆಯಾದವು. ಈ ಪ್ರಸಂಗ ಸಾಹಿತ್ಯ ಪ್ರವಚನಸಾಹಿತ್ಯವಾಗಿ ಬೆಳೆದು ಕನ್ನಡ ಪ್ರವಚನ ಸಾಹಿತ್ಯ ಪರಂಪರೆಗೆ ಕಾರಣವಾಯಿತು. ಶರಣರ ತತ್ವಗಳನ್ನು ಜನಸಾಮಾನ್ಯರಿಗೆ ತಲುಪಿಸಿದ ಸಾರುವಯ್ಯಗಳು, ಕೀರ್ತನಕಾರರು, ಪ್ರವಚನಕಾರರು ನಿರ್ವಹಿಸಿದ ಕೆಲಸ ಸ್ಮರಣೀಯವಾದದ್ದು.

ಪ್ರವಚನವೆಂಬುದಕ್ಕೆ ಮಾತು, ನುಡಿ, ವಿವರಣೆ, ಒಳ್ಳೆಯಮಾತು, ಧಾರ್ಮಿಕ ವಿಷಯಗಳ ನಿರೂಪಣೆ ಎಂಬ ಅರ್ಥಗಳಿವೆ. ಪ್ರವಚನದಂತೆ ಕೀರ್ತನೆಗಳು ಇವೆ. ಕೀರ್ತನೆಗಳು ಕಥೆಯನ್ನು ಪ್ರಧಾನವಾಗಿಟ್ಟುಕೊಂಡು ರಚನೆಯಾದ ಹಾಡುಗಬ್ಬಗಳಾದರೆ, ಪ್ರವಚನಗಳು ತತ್ವಪ್ರಧಾನವಾದ ಓದುಗಬ್ಬಗಳಾಗಿವೆ. ಹೀಗಾಗಿ ಪ್ರವಚನಗಳಲ್ಲಿ ನಿರ್ದಿಷ್ಟವಾದ ಕಥೆಗೆ ಅವಕಾಶವಿಲ್ಲ. ಮಾರ್ಮಿಕವಾದ ದೃಷ್ಟಾಂತಗಳನ್ನು ಬಳಸಿಕೊಂಡು ತರ್ಕ–ಪವಾಡರಹಿತವಾದ ತತ್ವಾದರ್ಶನದ ವಿವರಣೆ ಇರುತ್ತದೆ. ಸಾಹಿತ್ಯ–ಸಂಗೀತ–ವೇಷಭೂಷಣ–ಆಂಗಿಕಾಭಿನಯಗಳಿಂದ ಜನರನ್ನು ಆಕರ್ಷಿತರನ್ನಾಗಿಸುವ ಪ್ರಬಲ ಮಾಧ್ಯಮವಾಗಿ ಪ್ರವಚನಗಳು ಮಹತ್ವ ಪಡೆದುಕೊಂಡಿವೆ. ಪ್ರಸಂಗಸಾಹಿತ್ಯ ಸ್ವರೂಪದ ಪ್ರವಚನಸಾಹಿತ್ಯ 14–15ನೇ ಶತಮಾನದಲ್ಲಿ ರಚನೆಯಾಗಿರುವ ಸಾಧ್ಯತೆಯಿದೆ.

ಕನ್ನಡನಾಡಿನಲ್ಲಿ ಕ್ರಿ.ಶ. 18 ಹಾಗೂ 19ನೇ ಶತಮಾನದೀಚೆಗೆ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳು, ಮೈಸೂರಿನ ಗೌರೀಶಂಕರ ಸ್ವಾಮಿ, ಧಾರವಾಡದ ನವಕಲ್ಯಾಣ ಮಠದ ಕುಮಾರಸ್ವಾಮಿ, ವಿಜಯಪುರ ಜ್ಞಾನಾಶ್ರಮದ ಪೂಜ್ಯ ಸಿದ್ಧೇಶ್ವರಸ್ವಾಮಿ, ಹಾವೇರಿಯ ಪಂ. ಮಲ್ಲಿಕಾರ್ಜುನ ದೇವರು, ಕೂಡಲಸಂಗಮದ ಲಿಂಗಾನಂದಸ್ವಾಮಿಗಳಂಥ ನೂರಾರು ಮಠಾಧಿಪತಿಗಳು, ಬಸಪ್ಪಶಾಸ್ತ್ರೀ, ವೈ ನಾಗೇಶಶಾಸ್ತ್ರೀ, ಶಿವಮೂರ್ತಿಶಾಸ್ತ್ರೀ, ಗುಡೂರು ಶಿವಲಿಂಗಶಾಸ್ತ್ರೀ, ಕರಿಬಸವಶಾಸ್ತ್ರೀ, ಕಾಶೀನಾಥ ಶಾಸ್ತ್ರಿಗಳಂಥ ಪುಣ್ಯಪುರುಷರು, ಹರ್ಡೇಕರ ಮಂಜಪ್ಪ, ಹಲಸಂಗಿ ಚನ್ನಪ್ಪ, ದ್ಯಾಂಪುರದ ಚನ್ನಕವಿಗಳಂಥ ಗಣ್ಯಮಾನ್ಯರು, ಸೊಲ್ಲಾಪುರದ ರತಿದೇವಿ, ಸುಗ್ಗಲಾದೇವಿ, ಮಾತೇಮಹಾದೇವಿಯರಂಥ ತಾಯಂದಿರು ಪ್ರವಚನಸಾಹಿತ್ಯವನ್ನು ಹುಲುಸಾಗಿ ಬೆಳೆಸಿದ್ದಾರೆ. ಈ ಪ್ರವಚನ ಪರಂಪರೆಯಲ್ಲಿ ಪೂಜ್ಯ ಶ್ರೀ ಅಕ್ಕಅನ್ನಪೂರ್ಣ ತಾಯಿಯವರು ಒಬ್ಬರು.

ಪೂಜ್ಯ ಅಕ್ಕಅನ್ನಪೂರ್ಣ ತಾಯಿಯವರು ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿ ಬಾವನ್ನವಿವರವನೊಳಗೊಂಡು ಚರಿಸಿದ ಬಸವಣ್ಣನ 52 ಆಚಾರಗಳನ್ನು ಅಥವಾ ವ್ಯಕ್ತಿತ್ವವನ್ನು ಹಿಡಿದಿಟ್ಟಿರುವ ಮಹಾದೇವಿಯಕ್ಕನ ಒಂದು ವಚನದಲ್ಲಿ ಕೀರ್ತಿತನಾದ ಬಸವಣ್ಣನವರನ್ನು 116 ದಿವಸಗಳ ಕಾಲ ಪ್ರವಚನಮಾಡಿ ಬಾವನ್ನ ಬಸವಣ್ಣ ಹೆಸರಿನಲ್ಲಿ ರಚಿಸಿದ ಅಪರೂಪದ, ಮಹತ್ವದ ವ್ಯಾಖ್ಯಾನಗ್ರಂಥ. ವ್ಯಾಖ್ಯಾನವೆಂದರೆ ಒಂದು ಕೃತಿಯ ಒಳಮೈ ಹಾಗೂ ಹೊರಮೈಯನ್ನು ಶೋಧಿಸುವುದು. ಇಲ್ಲಿಯ ಅಕ್ಕನ ವಚನ ಬಸವಣ್ಣನವರ 52 ಗುಣಗಳಿಂದ ವಿನ್ಯಾಸಗೊಂಡಿರುವ ವಚನಕಟ್ಟಡ ಅದರ ಹೊರಮೈಯಾದರೆ; ಅದರಲ್ಲಿ ಉಲ್ಲೇಖವಾಗಿರುವ ಬಸವಸಿದ್ಧಾಂತಗಳನ್ನು ತಾತ್ವಿಕವಾಗಿ ವ್ಯಾಖ್ಯಾನಿಸಿರುವುದು ಬಾವನ್ನ ಬಸವಣ್ಣ ಕೃತಿಯ ಒಳಮೈ ಹೂರಣವಾಗಿದೆ. ಈ ಹೂರಣವನ್ನು ಬಸವಣ್ಣನವರ ಗುರುಕಾರುಣ್ಯದ ಅರಿವು, ಷಟ್ಸ್ಥಲ–ಪಂಚಾಚಾರ–ಅಷ್ಟಾವರಣಗಳ ನಿಲುವು, ನ್ಯಾಯನಿಷ್ಠುರಿ–ದಾಕ್ಷಿಣ್ಯಪರನಲ್ಲದ ಮನೋಧರ್ಮ, ಪರಸ್ತ್ರೀ–ಪರಧನಗಳೊಲ್ಲೆನೆಂಬ ಕಲಿತನ, ಕುಲಮದಗಳಿಗೆ, ಅರಿಷಡ್ವರ್ಗಗಳಿಗೆ, ಕುತ್ಸಿತ ಕುಹಕಕ್ಕೆ ಮನಗೂಡದ ಸದಾಚಾರ ಸಂಪನ್ನತೆ, ಕಾಯಕ ನಿಷ್ಠೆ–ದಾಸೋಹಂಭಾವದ ಮಹಾಮಣಿಹವನ್ನೊತ್ತ ಆರ್ಥಿಕ ಚಿಂತಕ, ಗುರು–ಲಿಂಗ–ಜಂಗಮದ ಪ್ರಾಣಾಭಿಮಾನಿಯಾದ ಬಸವಣ್ಣನ ವ್ಯಕ್ತಿತ್ವವನ್ನು ಕ್ರಮಬದ್ಧವಾಗಿ ವಿವರಿಸಿರುವ ವಚನವನ್ನು ಪೂಜ್ಯ ಅಕ್ಕಅನ್ನಪೂರ್ಣ ತಾಯಿಯವರು ಪರಿಶೋಧಿಸಿ ವ್ಯಾಖ್ಯಾನಿಸಿದ್ದಾರೆ.

ಕಲ್ಯಾಣ ಮಹಾತ್ಮೆಯನ್ನು ಕುರಿತು ಹೇಳುವ ಚನ್ನಬಸವಣ್ಣನವರ ವಚನದಂತೆ ಬಸವ ಮಹಾತ್ಮೆಯನ್ನು ಹೇಳುವ ಅಕ್ಕಮಹಾದೇವಿಯ ವಚನವನ್ನು ವ್ಯಾಖ್ಯಾನಿಸಿದ ಮೊದಲಿಗರಲ್ಲಿ ಮೊದಲಿಗರು ಪೂಜ್ಯ ಅಕ್ಕಅನ್ನಪೂರ್ಣ ತಾಯಿಯವರು ಎಂಬುದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ. ಒಂದು ತತ್ವವನ್ನು ನಿರೂಪಿಸಲಿಕ್ಕೆ ಜಗತ್ತಿನ ದಾರ್ಶನಿಕರ ಹೇಳಿಕೆಗಳು, ಮಂಕುತಿಮ್ಮನ ಕಗ್ಗಗಳು, ಶಿಶುನಾಳರ ತತ್ವಪದಗಳು ಇತ್ಯಾದಿ ಉಲ್ಲೇಖಗಳು ಈ ವ್ಯಾಖ್ಯಾನ ಕೃತಿಯಲ್ಲಿ ಸೂರೆಯಾಗಿವೆ. ಇಲ್ಲಿ ಪೂಜ್ಯ ಅನ್ನಪೂರ್ಣ ತಾಯಿಯವರಿಗೆ ಬಸವಣ್ಣ ಕೇಂದ್ರವ್ಯಕ್ತಿ. ಆತ ಅವರ ದೇಹ ಮತ್ತು ಮನಸ್ಸನ್ನು ಆವರಿಸಿಕೊಂಡಿದ್ದಾನೆ. ಅವರೇ ಹೇಳುವಂತೆ "ಅಕ್ಕನ ಈ ವಚನದ ಒಳಹೊರಗನ್ನು ಅರಿತು, ಅವರಿತ್ತ ಜ್ಞಾನದ ಬೆಳಕನ್ನು ಹೊತ್ತಿಸಿಕೊಂಡು ಹೊಳೆಯಬೇಕು" ಎನ್ನುವಲ್ಲಿ ಈ ಕೃತಿಯ ಮೂಲಕ ಬಸವಜ್ಯೋತಿಯನ್ನು ಎಲ್ಲೆಡೆ ಬೆಳಗುವ–ಬೆಳೆಸುವ ಉತ್ಕಟತೆಗೆ ಈ ಪ್ರವಚನ ಕೃತಿ ಸಾಕ್ಷಿಯಾಗಿದೆ. 'ಎಮ್ಮದೊಂದು ವಚನಪಾರಾಯಣಕ್ಕೆ ವ್ಯಾಸನದೊಂದು ಪುರಾಣ ಸಮಬಾರದಯ್ಯ!' ಎಂಬ ಶಿವಯೋಗಿ ಸಿದ್ಧರಾಮನ ಮಾತು ಮನುಕುಲದ ಬದುಕಿನ ದಿವ್ಯದರ್ಶನವನ್ನು ಮಾಡುವ ಶಕ್ತಿ ಶರಣರ ವಚನಗಳಿಗಿವೆ ಎಂಬುದು ಬಾವನ್ನ ಬಸವಣ್ಣ ಕೃತಿಯಿಂದ ಮನವರಿಕೆಯಾಗುತ್ತದೆ.

ಅಗಾಧವಾದ ಮಾತುಗಾರಿಕೆ; ಸಮಯೋಚಿತವಾಗಿ ವಚನಗಳನ್ನು ನಿರೂಪಿಸುವ ಶಕ್ತಿ ಹಾಗೂ ಬಹುಮೂಲದ ಓದಿನಿಂದ ಕನ್ನಡ ಪ್ರವಚನ ಸಾಹಿತ್ಯ ಪರಂಪರೆಯನ್ನು ಜೀವಂತವಾಗಿಟ್ಟಿರುವ ಪೂಜ್ಯ ಅಕ್ಕ ಅನ್ನಪೂರ್ಣತಾಯಿಯವರಿಗೆ ಶರಣು ಶರಣಾರ್ಥಿಗಳು. ಪೂಜ್ಯ ಅಕ್ಕನ ಈ ವ್ಯಾಖ್ಯಾನವನ್ನು ಶ್ರಮವಹಿಸಿ ಸಂಪಾದಿಸಿದ ಶ್ರೀ ರಮೇಶಸ್ವಾಮಿ ಕನಕಟ್ಟಾ ಅವರಿಗೆ ಬಸವಾಭಿಮಾನಿಗಳ ಅಭಿನಂದನೆಗಳು ಸಲ್ಲುತ್ತವೆ.

# ಪತ್ರಕರ್ತರಿಗೆ ಬಸ್ ಪಾಸ್, ಮಾಸಾಶನ ದೊರಕಿಸಲು ಕ್ರಮ : ಆಯುಕ್ತರ ಭರವಸೆ

## ಕೆಯೂಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ನೇತೃತ್ವದ ನಿಯೋಗ ವಾರ್ತಾ ಇಲಾಖೆ ಆಯುಕ್ತ ಸೂರಳ್‌ಕರ್ ಜೊತೆ ಚರ್ಚೆ

**ಬೆಂಗಳೂರು:** ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯೂಡಬ್ಲ್ಯೂಜೆ) ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರ ನೇತೃತ್ವದ ನಿಯೋಗವು, ವಾರ್ತಾ ಇಲಾಖೆಯ ಆಯುಕ್ತ ಸೂರಳ್‌ಕರ್ ವಿಕಾಸ್ ಕಿಶೋರ್ ಅವರನ್ನು ಶುಕ್ರವಾರ ಭೇಟಿ ಮಾಡಿ ಪತ್ರಕರ್ತರ ಸಮಸ್ಯೆ ಮತ್ತು ಬೇಡಿಕೆಗಳ ಬಗ್ಗೆ ಚರ್ಚೆ ನಡೆಸಿತು.

ನಿವೃತ್ತರಾಗಿರುವ ಹಿರಿಯ ಪತ್ರಕರ್ತರುಗಳಿಗೆ ಸರ್ಕಾರದಿಂದ ಪ್ರತಿ ತಿಂಗಳು ಬರಬೇಕಾಗಿರುವ ಮಾಸಾಶನ ಹಣ 2–3 ತಿಂಗಳಾದರೂ ಬರುತ್ತಿಲ್ಲ. ಅನೇಕರಿಗೆ ಜೀವನ ನಿರ್ವಹಣೆ ಮಾಡಲು ಔಷಧಿ ಖರೀದಿಸಲು ಹಣವಿಲ್ಲದೆ ಪರದಾಡುವ ಸ್ಥಿತಿ ಎದುರಾಗಿದೆ. ಕೂಡಲೇ ಸಮಸ್ಯೆ ಸರಿಪಡಿಸಿ ಪ್ರತಿ ತಿಂಗಳು ಸರಿಯಾಗಿ ಮಾಸಾಶನ ಅವರ ಅಕೌಂಟ್‌ಗೆ ಜಮೆ ಮಾಡಿಸಬೇಕು ಎಂದು ಆಯುಕ್ತರಿಗೆ ವಾಸ್ತವ ಸಮಸ್ಯೆ ಮನವರಿಕೆ ಮಾಡಿಕೊಡಲಾಯಿತು.

ಈ ಬಗ್ಗೆ ತಕ್ಷಣವೇ ಕ್ರಮ ಕೈಗೊಂಡು, ಮಾಸಾಶನ ಪ್ರತೀ ತಿಂಗಳು ದೊರೆಯಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಆಯುಕ್ತರು ಭರವಸೆ ನೀಡಿದರು.

ಮಾಸಾಶನ ಸಮಿತಿಯಲ್ಲಿ ಅರ್ಹರನ್ನು ಆಯ್ಕೆ ಮಾಡಿ ನಾಲ್ಕೈದು ತಿಂಗಳಾದರೂ, ಅವರಿಗೆ ಇನ್ನೂ ಮಾಸಾಶನ ಮಂಜೂರಾಗಿಲ್ಲ. ಸಣ್ಣ ಪುಟ್ಟ ಕಾರಣಕ್ಕಾಗಿ ತಡೆ ಹಿಡಿದಿರುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಿ ಮಾಸಾಶನ ಮಂಜೂರು ಮಾಡಬೇಕು ಮತ್ತು ಸಣ್ಣ ಪುಟ್ಟ ತೊಡಕುಗಳನ್ನು ನಿವಾರಣೆ ಮಾಡಿ ಅರ್ಹರೆಲ್ಲರಿಗೂ ಮಾಸಾಶನ ಸಿಗುವ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಲಾಯಿತು. ಅದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರು, ಬಗ್ಗೆ ಕಡತ ತರಿಸಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ಜರುಗಿಸಲಾಗುವುದು. ಚುನಾವಣೆ ನೀತಿ ಸಂಹಿತೆ ಮುಗಿದ ಮೇಲೆ ಈ ಬಗ್ಗೆ ಸಭೆಯನ್ನು ಕರೆಯಲಾಗುವುದು ಎಂದರು.

ಕೆಯುಡಬ್ಲ್ಯೂಜೆ ಒತ್ತಾಯದ ಮೇರೆಗೆ ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡಲು ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಪ್ರಕಟಿಸಿದ್ದು, ಅದನ್ನು ಜಾರಿ ಮಾಡಲು ಕೂಡಲೆ ಕ್ರಮ ತೆಗೆದುಕೊಳ್ಳಬೇಕು. ಮಾಧ್ಯಮ ಮಾನ್ಯತಾ ಕಾರ್ಡ್ ಹೊಂದಿರುವ ಪತ್ರಕರ್ತರು



ಪ್ರಯಾಣಿಸುವ ಸಾರಿಗೆ ಸಂಸ್ಥೆಯ ಉಚಿತ ಬಸ್ ಪಾಸ್‌ನ ಅವಧಿ ಮುಗಿದಿದ್ದರೂ, ಇನ್ನೂ ಬಸ್ ಪಾಸ್ ನವೀಕರಣವಾಗದೆ ಸಮಸ್ಯೆಯಾಗುತ್ತಿದೆ. ಆದ್ದರಿಂದ ಈ ಸಮಸ್ಯೆಯನ್ನು ಆದ್ಯತೆ ಮೇಲೆ ಬಗೆಹರಿಸಿಕೊಡಬೇಕು ಎಂದು ಸಂಘದ ರಾಜ್ಯಾಧ್ಯಕ್ಷರು ಒತ್ತಾಯಿಸಿದರು.

ಬಸ್ ಪಾಸ್ ವಿಳಂಬವಾಗುತ್ತಿರುವ ಬಗ್ಗೆ ಮತ್ತು ಪಾಸ್ ನವೀಕರಣ ಮಾಡುವಂತೆ ಈಗಾಗಲೇ ಕೆಎಸ್‌ಆರ್‌ಟಿಸಿಗೆ ಪತ್ರವನ್ನು ಬರೆಯಲಾಗಿದೆ. ಈ ಬಗ್ಗೆ ಮತ್ತೊಮ್ಮೆ ಗಮನಹರಿಸುವುದಾಗಿ ಆಯುಕ್ತರು ತಿಳಿಸಿದರು.

ಡಿವಿಜಿ ಸಂಸ್ಮರಣಾ ಕಾರ್ಯಕ್ರಮ ಮಂಕುತಿಮ್ಮನ ಕಗ್ಗದ ಖ್ಯಾತಿಯ ಸಾಹಿತಿ ಮತ್ತು ಪತ್ರಕರ್ತ ಹಾಗೂ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ ಸಂಸ್ಥಾಪಕ ಅಧ್ಯಕ್ಷ ಡಿ.ವಿ.ಗುಂಡಪ್ಪ (ಡಿವಿಜಿ) ಅವರ ಹೆಸರಿನಲ್ಲಿ ರಾಜ್ಯದಾದ್ಯಂತ ವಾರ್ತಾ ಇಲಾಖೆ ಸಹಯೋಗದಲ್ಲಿ ಕಾರ್ಯಕ್ರಮ ಮಾಡಲು ಇತ್ತೀಚೆಗೆ ನಡೆದ ಸಂಘದ ರಾಜ್ಯಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಗಿದೆ ಎನ್ನುವುದನ್ನು ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರು ಗಮನಕ್ಕೆ ತಂದರು. ಈ ಬಗ್ಗೆ ವಿವರವಾದ ಪ್ರಸ್ತಾವನೆಯನ್ನು ವಾರ್ತಾ ಇಲಾಖೆಗೆ ಸಲ್ಲಿಸುವಂತೆ ಆಯುಕ್ತರು ಸೂಚಿಸಿದರು.

ಸಂಘದ ರಾಜ್ಯ ಖಜಾಂಚಿ ವಾಸುದೇವ ಹೊಳ್ಳ, ಬೆಂಗಳೂರು ನಗರ ಘಟಕದ ಪ್ರದಾನ ಕಾರ್ಯದರ್ಶಿ ನರೇಂದ್ರ ಪಾರೆಕಟ್, ಕಾಸರಗೋಡು ಪತ್ರಕರ್ತರ ಸಂಘದ ಕಾರ್ಯದರ್ಶಿ ಪುರುಷೋತ್ತಮ ಪೆರ್ಲ ಇತರರು ನಿಯೋಗದಲ್ಲಿದ್ದರು.

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**25–05–2024 – ಶನಿವಾರ**

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಜ್ಯೈಷ್ಠ |
| ಯೋಗ | : ಸಿದ್ಧಿ |
| ಕರಣ | : ತೈತುಲ |
| ಸೂರ್ಯೋದಯ | : 05:43:26 |
| ಸೂರ್ಯಾಸ್ತ | : 19:04:38 |
| ರಾಹು | : 09:04–10:44 |
| ಯಮಘಂಡ | : 14:04–15:44 |
| ಗುಳಿಕ | : 05:43–07:24 |

## ತುಂಗಭದ್ರಾ ನೀರಿನ ಮಟ್ಟ



**ಶುಕ್ರವಾರ : 24–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.47 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 12 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.365 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1579.30 ಅಡಿ |
| ಒಳ ಹರಿವು | 1235 ಕ್ಯುಸೆಕ್ |
| ಹೊರ ಹರಿವು | 192 ಕ್ಯುಸೆಕ್ |
| ಸಾಮರ್ಥ್ಯ | 4.140 ಟಿಎಂಸಿ |

# ಸ್ಕಿಜೋಫ್ರೀನಿಯಾ ಬಗ್ಗೆ ಭಯಬೇಡ ತಿಳುವಳಿಕೆ ಇರಲಿ: ನ್ಯಾ.ರಾಜೇಶ

■ **ಹಂಪಿ ಟೈಮ್ಸ್ ಬಳ್ಳಾರಿ**

ಮಾನಸಿಕ ಖಾಯಿಲೆಗಳಲ್ಲಿಯೇ ತೀವ್ರ ಸ್ವರೂಪವಾದ ಸ್ಕಿಜೋಫ್ರೀನಿಯಾ ಖಾಯಿಲೆಯ ಬಗ್ಗೆ ಜಾಗೃತಿ ಇರಬೇಕು. ಭಯಪಡುವ ಅವಶ್ಯಕತೆ ಇಲ್ಲ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಹೊಸಮನೆ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ, ಜಿಲ್ಲಾ ಆಸ್ಪತ್ರೆ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ವಕೀಲರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಸ್ಕಿಜೋಫ್ರೇನಿಯ ದಿನಾಚರಣೆ ಅಂಗವಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಜನ ಜಾಗೃತಿ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು.

ಸಾಮಾನ್ಯವಾಗಿ ಸ್ಕಿಜೋಫ್ರೇನಿಯ ರೋಗಿಗಳನ್ನುಮನೆಯಲ್ಲಿಯೇಇಟ್ಟುಕೊಳ್ಳುವುದು ಅಪಾಯ ಎಂಬ ನಂಬಿಕೆ ಇತ್ತು. ಆದರೆ ಕಳೆದ 30 ವರ್ಷಗಳಿಂದ ಈಚೆಗೆ ವೈದ್ಯಕೀಯ ಕ್ಷೇತ್ರದಲ್ಲಾದ ಸಂಶೋಧನೆ ಹಾಗೂ ಬದಲಾದ ಚಿಕಿತ್ಸೆ ವಿಧಾನಗಳಿಂದ ಆರಂಭದಲ್ಲಿಯೇ ರೋಗಿಯ ಮನಃಸ್ಥಿತಿಗೆ ಅನುಸಾರವಾಗಿ ಕುಟುಂಬದ ಸದಸ್ಯರ ನೆರವಿನಿಂದ ಚಿಕಿತ್ಸೆ ನೀಡಿದರೆ ಖಾಯಿಲೆ ಬೇಗ ವಾಸಿಯಾಗಬಹುದು ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್‌ಬಾಬು ಅವರು ಮಾತನಾಡಿ, ಸಾಮಾನ್ಯವಾಗಿ 15 ರಿಂದ 25 ವರ್ಷ ವಯಸ್ಸಿನ ಅವಧಿಯ ತರುಣರಲ್ಲಿ ಗ್ರಾಮೀಣ–ಪಟ್ಟಣ, ಬಡತನ–ಶ್ರೀಮಂತಿಕೆ ಎಂಬ ಬೇಧಭಾವವಿಲ್ಲದೇ ಎಲ್ಲರಿಗೂ ಬರಬಹುದಾದ ಖಾಯಿಲೆಯಾಗಿದೆ. ವ್ಯಕ್ತಿಯ ಮನಸ್ಸಿನ ಕ್ರಿಯೆಗಳಲ್ಲಿ ಆಲೋಚನೆ, ಭಾವನೆಗಳನ್ನು ಹಾಗೂ ಪಂಚೇಂದ್ರಿಯಗಳ ಮೂಲಕ ತನ್ನ ಸುತ್ತಲಿನಪರಿಸರವನ್ನುಅರ್ಥಮಾಡಿಕೊಳ್ಳಲಾಗದ ಪರಿಸ್ಥಿತಿಗೆ ಹೋಗುತ್ತಾನೆ ಎಂದರು.



ಮಾತ್ರೆ ಮತ್ತು ಚುಚ್ಚು ಮದ್ದು ರೂಪದಲ್ಲಿ ಔಷಧಿ ಲಭ್ಯವಿದ್ದು, ಖಾಯಿಲೆ ಕಾಣಿಸಿಕೊಂಡ ಕೆಲವೇ ವಾರದೊಳಗೆ ಔಷಧೋಪಚಾರ ಪ್ರಾರಂಭಿಸಿದರೆ ಬೇಗನೇ ಹತೋಟಿಗೆ ಬರುತ್ತದೆ ಎಂದು ತಿಳಿಸಿದರು.

ಈಗಾಗಲೇ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗದಿಂದ ಮನೋಚೈತನ್ಯ ಕಾಯ್ದೆ ಕಾರ್ಯಕ್ರಮದಡಿ ಪ್ರತಿ ಮಂಗಳವಾರ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಉಚಿತ ಆರೋಗ್ಯ ಶಿಬಿರ ತಪಾಸಣೆ ಏರ್ಪಡಿಸಿ, ರೋಗಿಗಳಿಗೆ ಆತ್ಮಸ್ಥೈರ್ಯ ತುಂಬುವುದರ ಜೊತೆಗೆ ಚಿಕಿತ್ಸೆ ನೀಡಲಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಅಧಿಕಾರಿ ಡಾ.ವೀರೇಂದ್ರ ಕುಮಾರ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ಎನ್.ಬಸರೆಡ್ಡಿ, ಜಿಲ್ಲಾ ಆರೋಗ್ಯ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಡಾ.ರಮೇಶ್.ಜಿ, ಜಿಲ್ಲಾ ರೋಗವಾಹಕ ಆಶ್ರೀತ ರೋಗಗಳ ನಿಯಂತ್ರಣಾಧಿಕಾರಿ ಡಾ.ಅಬ್ದುಲ್ಲಾ, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಪೂರ್ಣಿಮ. ಎಸ್.ಕಟ್ಟಿಮನಿ, ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮರಿಯಂಬಿ.ವಿ.ಕೆ., ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗದ ಮಾನಸಿಕ ತಜ್ಞೆ ಡಾ.ರೋಹನ್ ವನಗುಂದಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್ ದಾಸಪ್ಪನವರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಜಾಥಾದಲ್ಲಿ ವಿಮ್ಸ್ ನರ್ಸಿಂಗ್ ಕಾಲೇಜಿನ ಪ್ರಶಿಕ್ಷಣಾಥಿಗಳು ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಆಶಾ ಕಾರ್ಯಕರ್ತೆಯರು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಜಾಥಾವು ಜಿಲ್ಲಾ ಆಸ್ಪತ್ರೆಯ ಆವರಣದಿಂದ ಆರಂಭವಾಗಿ ಸಂಗಂ ವೃತ್ತ, ಗಡಿಗಿ ಚೆನ್ನಪ್ಪ ವೃತ್ತ, ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಿಂದ ಮರಳಿ ಜಿಲ್ಲಾಸ್ಪತ್ರೆಯ ಆವರಣದಲ್ಲಿ ಅಂತ್ಯಗೊಂಡಿತು. ಜಾಥಾದಲ್ಲಿ ಸ್ಕಿಜೋಫ್ರೀನಿಯ ಕುರಿತ ಜಾಗೃತಿ ಫಲಕಗಳನ್ನುಪ್ರದರ್ಶಿಸಲಾಯಿತು.

## ವಿಜ್ಞಾನ

# ಗಾಯ ಏಕೆ ಉರಿಯುತ್ತದೆ?

■ **ಆರ್.ಬಿ.ಗುರುಬಸವರಾಜ**

ಸೈಕಲ್ ಕಲಿಯಲು ಹೋಗಿದ್ದ ವಿರಾಜ್ ಬಿದ್ದು ಗಾಯ ಮಾಡಿಕೊಂಡ. "ಅಮ್ಮಾ ನೋವು" ಎನ್ನುತ್ತಲೇ ಮನೆಗೆ ಬಂದ. ಏನಾಯ್ತು ಎಂದು ತಾಯಿ ನೋಡಿ ಗಾಯಕ್ಕೆ ಔಷಧಿ ಹಚ್ಚಿದಳು. ಆದರೂ ವಿರಾಜ್ ನೋವು ತಡೆಯಲಾರದೇ "ಅಮ್ಮಾ ಉರಿ, ಅಮ್ಮಾ ಉರಿ" ಎಂದು ಅರಚುತ್ತಿದ್ದ. ಇದನ್ನು ನೋಡಿದ ಧನ್ವಿತ "ಪಪ್ಪಾ ಗಾಯ ಏಕೆ ಉರಿಯುತ್ತದೆ?" ಎಂದಳು. ಅದಕ್ಕೆ ತಂದೆಯ ಉತ್ತರ ಹೀಗಿದೆ.

ಬೇರೆ ಬೇರೆ ಕಾರಣಗಳಿಗಾಗಿ ದೇಹದ ಭಾಗಗಳಲ್ಲಿ ಗಾಯಗಳಾಗುವುದು ಸಹಜ. ಬಹುತೇಕ ವೇಳೆ ಗಾಯಗಳಿಂದ ಉರಿಯುವ ಸಂವೇದನೆಯನ್ನು ಅನುಭವಿಸುತ್ತೇವೆ. ಗಾಯಗಳೇಕೆ ಉರಿಯುತ್ತವೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಗಾಯಗಳು ಉರಿಯುವ ಸಂವೇದನೆಯನ್ನು ತಿಳಿಸಲು ನಿರ್ದಿಷ್ಟ ಕಾರಣ ಇದೆ. ನೀವು ಗಾಯದಲ್ಲಿ ಉರಿಯುವ ಸಂವೇದನೆಯನ್ನು ಅನುಭವಿಸಿದಾಗ, ಇದು ಸಾಮಾನ್ಯವಾಗಿ ನಿಮ್ಮ ದೇಹವು ಗುಣಪಡಿಸುವ ಪ್ರಕ್ರಿಯೆಯನ್ನು ಪ್ರಾರಂಭಿಸುತ್ತಿದೆ ಎಂಬುದರ ಸಂಕೇತವಾಗಿದೆ. ಈ ಸಂವೇದನೆಯು ದೇಹದಲ್ಲಿ ಕೆಲವು ರಾಸಾಯನಿಕಗಳ ಬಿಡುಗಡೆಯಿಂದ ಉಂಟಾಗುತ್ತದೆ, ಅದು ಗಾಯವನ್ನು ರಕ್ಷಿಸಲು ಮತ್ತು ಗುಣಪಡಿಸುವಿಕೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ.



ಗಾಯ ಮಾಯುವ ಪ್ರಕ್ರಿಯೆಯಲ್ಲಿ ಬಿಡುಗಡೆ ಯಾಗುವ ಮುಖ್ಯ ರಾಸಾಯನಿಕಗಳಲ್ಲಿ ಒಂದನ್ನು ಹಿಸ್ಟಮೈನ್ ಎಂದು ಕರೆಯಲಾಗುತ್ತದೆ. ಇದು ಗಾಯದ ಸುತ್ತ ರಕ್ತನಾಳಗಳನ್ನು ಹಿಗ್ಗಿಸಲು ಕಾರಣವಾಗಿದೆ. ಈ ಸಂದರ್ಭದಲ್ಲಿ ಹೆಚ್ಚಿದ ರಕ್ತದ ಹರಿವು ಉರಿಯುವ ಸಂವೇದನೆಯನ್ನು ಉಂಟುಮಾಡಬಹುದು. ಜೊತೆಗೆ ಕೆಂಪು ಮತ್ತು ಊತವನ್ನು ಉಂಟುಮಾಡಬಹುದು.

ಹಿಸ್ಟಮೈನ್ ಜೊತೆಗೆ,ಪ್ರೋಸ್ಟಗ್ಲಾಂಡಿನ್‌ಗಳುಮತ್ತುಸೈಟೋಕಿನ್‌ಗಳಂತಹ ಇತರ ರಾಸಾಯನಿಕಗಳು ಸಹ ಗುಣಪಡಿಸುವ ಪ್ರಕ್ರಿಯೆಯಲ್ಲಿ ಬಿಡುಗಡೆಯಾಗುತ್ತವೆ. ಇದು ಗಾಯದಲ್ಲಿ ಉರಿಯುವ ಸಂವೇದನೆಗೆ ಕಾರಣವಾಗಬಹುದು. ಈ ರಾಸಾಯನಿಕಗಳು ಉರಿಯೂತ ಮತ್ತು ನೋವನ್ನು ಉಂಟುಮಾಡಬಹುದು. ಜೊತೆಗೆ ನೋವಿನ ಜಾಗದಲ್ಲಿ ನರಗಳ ತುದಿಗಳನ್ನು ಪ್ರಚೋದಿಸಬಹುದು.

ಎಲ್ಲಾ ಗಾಯಗಳು ಸುಡುವ ಸಂವೇದನೆಯನ್ನು ಉಂಟುಮಾಡುವುದಿಲ್ಲ ಎಂಬುದನ್ನು ಗಮನಿಸುವುದು ಮುಖ್ಯ. ಗಾಯದ ಸ್ಥಳ ಮತ್ತು ಗಾತ್ರವನ್ನು ಅವಲಂಬಿಸಿ ಸಂವೇದನೆಯ ತೀವ್ರತೆಯು ಬದಲಾಗಬಹುದು. ನೀವು ಗಾಯದಲ್ಲಿ ಗಮನಾರ್ಹವಾದ ನೋವು ಅಥವಾ ಅಸ್ವಸ್ಥತೆಯನ್ನು ಅನುಭವಿಸುತ್ತಿದ್ದರೆ, ಸರಿಯಾದ ಗುಣಪಡಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಸೋಂಕನ್ನು ತಡೆಗಟ್ಟಲು ವೈದ್ಯಕೀಯ ಸಲಹೆ ಪಡೆಯುವುದು ಒಳ್ಳೆಯದು.

# ಕಳಪೆ ಬೀಜ,ರಸಗೊಬ್ಬರ ಮಾರಾಟ ತಡೆಗೆ ಗೊಬ್ಬರದಂಗಡಿ ಮಾಲಿಕರ ಸಭೆ ಕರೆಯಲು ರೈತರ ಆಗ್ರಹ



■ **ಹಂಪಿ ಟೈಮ್ಸ್ ಕೊಟ್ಟೂರು**

ತಾಲೂಕಿನಲ್ಲಿ ಉತ್ತಮ ಮಳೆಯಾಗಿದ್ದು ಕೃಷಿ ಚಟುವಟಿಕೆಗಳು ಚುರುಕುಗೊಂಡಿದ್ದು, ಪಟ್ಟಣದಲ್ಲಿ ಕಳಪೆ ಬೀಜ, ಗೊಬ್ಬರ ಮಾರಾಟ ಮಾಡದಂತೆ ಸೂಚಿಸಲು ಶೀಘ್ರ ರಸಗೊಬ್ಬರ ಅಂಗಡಿ ಮಾಲಿಕರ ಸಭೆ ಕರೆಯಬೇಕೆಂದು ತಹಶಿಲ್ದಾರ ಅಮರೇಶ್ ಜಿ.ಕೆ ಅವರಿಗೆ ಶುಕ್ರವಾರ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸದಸ್ಯರು ಮನವಿ ಸಲ್ಲಿಸಿದರು.

ಕೃಷಿ ಚಟುವಟಿಕೆಗೆ ಸಂಬಂಧಿಸಿದ ತೋಟಗಾರಿಕೆ ಇಲಾಖೆ ಅಧಿಕಾರಿಗಳು, ಕೃಷಿ ಅಧಿಕಾರಿಗಳು ಸೇರಿದಂತೆ ಸಂಬಂಧ ಪಟ್ಟ ಅಧಿಕಾರಿಗಳು ಅಂದಿನ ಸಭೆಗೆ ಹಾಜರಾಗುವಂತೆ ಸೂಚಿಸಬೇಕು ಎಂದು ತಹಶಿಲ್ದಾರಿಗೆ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಎನ್.ಭರಮಣ್ಣ ಆಗ್ರಹಿಸಿದರು.

ಜೊತೆಗೆ, ರಸಗೊಬ್ಬರ ಮಾರಾಟದ ಮಾಲಿಕರು ಎಂ.ಆರ್.ಪಿ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡದಂತೆ ಮತ್ತು ನಿಯಮ ಉಲ್ಲಂಘನೆ ಮಾಡಿದ ಮಾಲಿಕರಿಗೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ತಿಳಿಸಲು ಹೇಳಿದರು. ಈ ವೇಳೆ ರೈತರಾದ ಅಂಜಿನಪ್ಪ, ಕೊಟ್ರಬಸಪ್ಪ ಹಾಗೂ ದೊಡ್ಡವೀರಪ್ಪ ಸೇರಿದಂತೆ ಇತ್ಯಾದಿ ರೈತ ಮುಖಂಡರು ಹಾಜರಿದ್ದರು.

# ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶಕ್ಕೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಸಮಾಜ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿಗೆ ಕೊಪ್ಪಳ ಜಿಲ್ಲೆಯ ವಿವಿಧ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪರೀಕ್ಷೆಯ ಮೂಲಕ ಪರಿಶಿಷ್ಟ ಪಂಗಡದ ವಿದಾರ್ಥಿಗಳನ್ನು ಆಯ್ಕೆ ಮಾಡಲು ಅರ್ಜಿ ಸಲ್ಲಿಕೆ ಅವಧಿಯನ್ನು ಜೂನ್ 01 ರವರೆಗೆ ವಿಸ್ತರಿಸಲಾಗಿದೆ.

ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಾದ ಕುಕನೂರಿನ ವಿದ್ಯಾಶ್ರೀ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಕೊಪ್ಪಳ ನಗರದ ಹೊಸಪೇಟೆ ರಸ್ತೆಯ ಎಸ್.ಎಫ್.ಎಸ್ ಪ್ರೌಢಶಾಲೆ ಹಾಗೂ ಲಯನ್ಸ್ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆ, ಗಂಗಾವತಿಯ ಬೇಥಲ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಭಾಗ್ಯನಗರದ ಜ್ಞಾನಬಂಧು ಪ್ರಾಥಮಿಕ ಹಾಗೂ ಪ್ರೌಢಶಾಲೆ ಮತ್ತು ಕುಷ್ಟಗಿಯ ವಿಜಯ ಚಂದ್ರಶೇಖರ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಕೊಪ್ಪಳದ ನವಚೇತನ ಆಂಗ್ಲ ಮಾಧ್ಯಮ ಪ್ರಾಥಮಿಕ, ಪ್ರೌಢಶಾಲೆ ಹಾಗೂ ವಿಜ್ಞಾನ ಪದವಿ ಪೂರ್ವ ಕಾಲೇಜುಗಳಲ್ಲಿ 6ನೇ ತರಗತಿಗೆ ಪ್ರವೇಶಕ್ಕೆ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯು ಅವಕಾಶ ಕಲ್ಪಿಸಿದೆ.

ಪರಿಶಿಷ್ಟ ಪಂಗಡದ ಅರ್ಜಿಗಳು ಕಡಿಮೆ ಪ್ರಮಾಣದಲ್ಲಿ ಸ್ವೀಕೃತಿಯಾಗಿರುವುದರಿಂದ ಅರ್ಜಿ ಸ್ವೀಕಾರ ದಿನಾಂಕವನ್ನು ಜೂನ್ 01 ರವರೆಗೆ ವಿಸ್ತರಿಸಲಾಗಿದೆ. ಆಸಕ್ತ ಹಾಗೂ ಅರ್ಹ ವಿದ್ಯಾರ್ಥಿಗಳು ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಕೊಪ್ಪಳ ಕಛೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ಹಾಗೂ ಆಯಾ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳವರನ್ನು ಸಂಪರ್ಕಿಸ ಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಸ್ಪತ್ರೆ ಸಿಬ್ಬಂದಿಗೆ ಆರೋಗ್ಯ ತಪಾಸಣೆ
## ರೋಗಿಗಳ ಬಗ್ಗೆ ಹೆಚ್ಚಿನ ಕಾಳಜಿವಹಿಸಿ : ಡಾ.ಶಿವರಾಜ್

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಆಸ್ಪತ್ರೆಗೆ ದಾಖಲಾಗುವ ರೋಗಿಗಳೊಂದಿಗೆ ಸದಾ ಇರುವ ಆಸ್ಪತ್ರೆಯ ಸಿಬ್ಬಂದಿವರ್ಗ ಮೊದಲು ಜಾಗೃತರಾಗಿರಬೇಕು ಎನ್ನುವ ಹಿನ್ನೆಲೆಯಲ್ಲಿ, ಆಸ್ಪತ್ರೆಯ ಪ್ರತಿಯೊಬ್ಬ ಸಿಬ್ಬಂದಿಯೂ ಆರೋಗ್ಯ ತಪಾಸಣೆಗೊಳಪಡಬೇಕು ಎಂದು ತಾಲೂಕು ವೈದ್ಯಾಧಿಕಾರಿ ಹಾಗೂ ಪಟ್ಟಣದ ಸರ್ಕಾರಿ ನೂರು ಹಾಸಿಗೆ ಆಸ್ಪತ್ರೆಯ ಪ್ರಭಾರಿ ಮುಖ್ಯಾಧಿಕಾರಿ ಯಾಗಿರುವ ಡಾ.ಶಿವರಾಜ್ ಅಭಿಪ್ರಾಯ ವ್ಯಕ್ತಪಡಿಸಿದರು.



ಪಟ್ಟಣದ ಗಂಗಾವತಿ ವೆಂಕೋಬಣ್ಣನವರ ಸಾರ್ವಜನಿಕ ನೂರು ಹಾಸಿಗೆ ಆಸ್ಪತ್ರೆಯಲ್ಲಿ, ವಿಜಯನಗರ ಜಿಲ್ಲಾ ಕುಟುಂಬ ಮತ್ತು ಕಲ್ಯಾಣ ಇಲಾಖೆ, ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ, ಬಳ್ಳಾರಿಯ ವಿಮ್ಸ್ ರಕ್ತ ಭಂಡಾರ ಇವರ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ, ಆಸ್ಪತ್ರೆಯ ಎಲ್ಲಾ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿವರ್ಗಕ್ಕೆ ಉಚಿತ ಆರೋಗ್ಯ ತಪಾಸಣಾ ಮತ್ತು ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಆಸ್ಪತ್ರೆಯಲ್ಲಿರುವ 15ಜನ ವೈದ್ಯರು ಸೇರಿ ಒಟ್ಟು 150 ಸಿಬ್ಬಂದಿಯವರಿದ್ದು, ಪ್ರತಿಯೊಬ್ಬರಿಗೂ ಬಿ.ಪಿ, ಶುಗರ್, ದಂತ, ಕಣ್ಣು ಪರೀಕ್ಷೆ ಸೇರಿದಂತೆ ಇತರೆ ನಾನಾ ರೋಗಗಳ ತಪಾಸಣೆ ಜರುಗಿತು.



ಇದು ಪ್ರತಿವರ್ಷ ಸಿಬ್ಬಂದಿಗಾಗಿ ಒಂದು ದಿನದಶಿಬಿರವಿರುತ್ತದೆ. ಕಳೆದ ಐದಾರು ವರ್ಷಗಳಿಂದ ಆಸ್ಪತ್ರೆ ಯಲ್ಲಿ ಈ ಶಿಬಿರವನ್ನು ಏರ್ಪಡಿಸಿದ್ದಿಲ್ಲ. ಈ ದಿನ ಹಮ್ಮಿಕೊಂಡಿರುವ ಶಿಬಿರದಲ್ಲಿ ಪ್ರತಿಯೊಬ್ಬ ಸಿಬ್ಬಂದಿ ಯೂ ಪಾಲ್ಗೊಂಡಿದ್ದು, ಸ್ವಯಂ ಪ್ರೇರಿತರಾಗಿ ಸಿಬ್ಬಂದಿಯವರು ರಕ್ತದಾನ ಮಾಡಿದ್ದಾರೆ. ಅಲ್ಲದೆ, ಮುಂಜಾಗೃತೆಗಾಗಿ ಸೋಂಕು ಉಂಟಾಗಬಾರದೆಂದು ರೋಗಿಗಳೊಂದಿಗೆ ಸದಾ ಒಡನಾಟವಿರುವ ಸಿಬ್ಬಂದಿಯವರಿಗೆ ವ್ಯಕ್ಸಿನೇಷನ್ ಹಾಕಲಾಗುವುದು ಎಂದರು.

ಮಕ್ಕಳ ತಜ್ಞರಾದ ಡಾ.ತಿಪ್ಪೇಸ್ವಾಮಿ ಸೇರಿದಂತೆ ಅನೇಕರು ಮಾತನಾಡಿದರು. ಶಿಬಿರದಲ್ಲಿ 25ಜನ ಸಿಬ್ಬಂದಿಗಳು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಿದರೆ, 150ಜನರು ಅರೋಗ್ಯ ತಪಾಣೆಗೊಳಪಟ್ಟರು.

ಈ ವೇಳೆ ಆಸ್ಪತ್ರೆಯ ವಿವಿಧ ತಜ್ಞರಾದ ಡಾ.ವಿನಾಯಕ, ಡಾ.ಲಕ್ಷ್ಮಿದೇವಿ ಮತ್ತಿತರರು ಇದ್ದರು. ಹಿರಿಯ ಆಪ್ತ ಸಮಲೋಚಕರಾದ ಜಿ. ಅಶೋಕ್ ನಿರ್ವಹಿಸಿದರು.

# ವಿವಿಧ ವೃತ್ತಿಗಳಲ್ಲಿ 30 ದಿನಗಳ ತರಬೇತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ಹಾಗೂ ಕಲಬುರಗಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಇವರ ಸಂಯುಕ್ತಾಶ್ರಯದಲ್ಲಿ ಸ್ವಯಂ ಉದ್ಯಮಗಳನ್ನು ಪ್ರಾರಂಭಿಸಲು ಆಸಕ್ತರಿರುವವರಿಗೆ ವಿವಿಧ ವೃತ್ತಿಗಳಲ್ಲಿ 30 ದಿನಗಳ ನಿರ್ದಿಷ್ಟ ವಲಯಾಧಾರಿತ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಜಿಲ್ಲೆಯ ಹೊಸಪೇಟೆಯಲ್ಲಿ ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಕ್ ತರಬೇತಿ, ಹರಪನಹಳ್ಳಿಯಲ್ಲಿ ಬ್ಯೂಟಿ ಪಾರ್ಲರ್ ಮ್ಯಾನೇಜ್‌ಮೆಂಟ್ ತರಬೇತಿ, ಹೂವಿನಹಡಗಲಿಯಲ್ಲಿ ಫ್ಯಾಷನ್ ಡಿಸೈನಿಂಗ್ ತರಬೇತಿ, ಕೂಡ್ಲಿಗಿಯಲ್ಲಿ ಎಲೆಕ್ಟ್ರಿಕಲ್ ಹೋಮ್ ಅಪ್ಲೈಯನ್ಸ್ ತರಬೇತಿ ಹಾಗೂ ಹಗರಿಬೊಮ್ಮನಹಳ್ಳಿಯಲ್ಲಿ ಮೋಬೈಲ್ ಫೋನ್ಸ್ ರಿಪೇರಿ ಮತ್ತು ಸರ್ವೀಸಿಂಗ್ ಬಗ್ಗೆ ತರಬೇತಿಗಳನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮಗಳಲ್ಲಿ ಆಯಾ ವೃತ್ತಿಗಳಲ್ಲಿ ಪ್ರಾಯೋಗಿಕ ಹಾಗೂ ಸಿದ್ಧಾಂತದೊಂದಿಗೆ ಸ್ವಯಂ ಉದ್ಯಮಗಳ ಬಗ್ಗೆ ಮಾಹಿತಿ, ಉದ್ಯಮಶೀಲತೆ, ಯಶಸ್ವಿ ಉದ್ಯಮಶೀಲರ ಗುಣಲಕ್ಷಣಗಳು, ಉದ್ಯಮಗಳನ್ನು ಪ್ರಾರಂಭಿಸುವ ಹಂತಗಳು, ಸ್ವಯಂ ಉದ್ಯೋಗಕ್ಕೆ ಇರುವ ಸರ್ಕಾರದ ಯೋಜನೆಗಳು, ಬ್ಯಾಂಕ್ ವ್ಯವಹಾರ ಮಾಡುವ ಬಗ್ಗೆ, ಸಾಲ, ಹಣಕಾಸು ಮತ್ತು ಹಣಕಾಸೇತರ ಸೌಲಭ್ಯಗಳ ಬಗ್ಗೆ, ಲೆಕ್ಕ ಪತ್ರ ನಿರ್ವಹಣೆ, ಯೋಜನಾ ವರದಿ ತಯಾರಿಕೆ, ಸಾಲ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸುವಲ್ಲಿ ಸಹಾಯ ನೀಡುವದು ಮತ್ತು ಸಂಬಂಧಪಟ್ಟ ಇತ್ಯಾದಿ ವಿಷಯಗಳ ಬಗ್ಗೆ ಅನುಭವಿ ಅತಿಥಿ ಬೋಧಕರಿಂದ ಉಪನ್ಯಾಸ ಮಾಹಿತಿ ನೀಡಲಾಗುವದು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತರಿರುವ 18 ರಿಂದ 40 ವರ್ಷದೊಳಗಿನ, ಕನಿಷ್ಠ ಎಸ್ಸೆಸ್ಸೆಲ್ಸಿ ಪಾಸ್ ಆದ ಎಲ್ಲಾ ವರ್ಗದ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು ಮೊ:6362681190, 7204016012, 9986332736 ಇಲ್ಲಿಗೆ ಕರೆ ಮಾಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ. 30 ಅಭ್ಯರ್ಥಿಗಳ ತಂಡದಲ್ಲಿ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಶೇ.35 ರಷ್ಟು ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶೇ.15 ರಷ್ಟು ಆದ್ಯತೆ ನೀಡಲಾಗುವುದು ಎಂದು ವಿಜಯನಗರದ ಸಿಡಾಕ್, ಜಂಟಿ ನಿರ್ದೇಶಕರಾದ ಜಿ. ಯು. ಹುಡೇದ ತಿಳಿಸಿದ್ದಾರೆ.

**AFFIDAVIT**

I, **Akash Kumar S/o Anil kumar,** Residing at Door No 1355, 31st Ward Gandhi colony, New Mookambika Temple. Hosapete -583 203 Hosapete Taluk, Vijayanagar District Karnataka State.

the undersigned do hereby absolutely renounce and abandon the use of my former name @ A.Akash kumar @ Akash kumar Anil Kumar @ Anil kumar Akash Kumar and in lieu thereof be assumed the name of **Akash Kumar.**
vide affidavit dated 23-05-2024 before Notary Chandrashekhar P Yalagod at Hosapete

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA